ಅಧ್ಯಾಯ 2

ಭಾರತೀಯ ಸಾಂಸ್ಕೃತಿಕ ಮೂಲಬೇರುಗಳು

"ಯಾವುದನ್ನು ಕದಿಯಲು ಸಾಧ್ಯವಿಲ್ಲವೋ; ಯಾವುದನ್ನು ಅಧಿಕಾರಿಗಳಿಂದ ಮುಟ್ಟುಗೋಲು ಹಾಕಿಕೊಳ್ಳಲು ಸಾಧ್ಯವಿಲ್ಲವೋ; ಅದು ಯಾವುದಕ್ಕೂ ಭಾರವಲ್ಲ ಹಾಗಯೇ ಯಾವ ಕಾರಣಕ್ಕೂ ಅದು ಹೊರೆಯಲ್ಲ; ಏಷ್ಟೆ ಬಳಸಿದರೂ ಅದು ಪ್ರತಿದಿನ ಬೆಳೆಯುತ್ತ ಹೋಗುತ್ತದೆ. ಅದು ಎಲ್ಲಕ್ಕಿಂತ ದೊಡ್ಡ ಸಂಪತ್ತು, ಅದವೇ ನಿಜವಾದ ಜ್ಞಾನ ಸಂಪತ್ತು."

- ಸುಭಾಷಿತಾ (ಬುದ್ಧಿವಂತ ಮಾತು)

ಒಬ್ಬ ಋಷಿ (ಕರ್ನಾಟಕದ ಹಂಪಿಯಿಂದ) | ಬುದ್ಧ (ಭೂತಾನ್ ನಿಂದ) | ಮಹಾವೀರ (ಬಿಹಾರದಿಂದ)

© NCERT not to be republished

ಕೆಲವು ಪ್ರಮುಖ ಪ್ರಶ್ನೆಗಳು?

೧. ವೇದಗಳು ಎಂದರೇನು? ಅವುಗಳ ಸಂದೇಶವೇನು?

೨. ಕ್ರಿ.ಪೂ ಮೊದಲ ಸಹಸ್ರಮಾನದಲ್ಲಿ ಭಾರತದಲ್ಲಿ ಆವಿರ್ಭವಿಸಿದ ಚಿಂತನಾ ಕ್ರಮವೇನು? ಅದರ ಮುಖ್ಯ ತತ್ವಗಳು ಏನಾಗಿದ್ದವು

೩. ಭಾರತದ ಸಂಸ್ಕೃತಿಗೆ ಜನಪದ ಮತ್ತು ಬುಡಕಟ್ಟು ಸಂಪ್ರದಾಯಗಳ ಕೊಡುಗೆಯೇನು?

0681CH07

ಆಧ್ಯಾತ್ಮಿಕ: ಆತ್ಮ ಅಥವಾ ಆತ್ಮಕ್ಕೆ ಸಂಬಂಧಿಸಿದೆ (ಸಂಸ್ಕೃತ ಮತ್ತು ಅನೇಕ ಭಾರತೀಯ ಭಾಷೆಗಳಲ್ಲಿ ಆತ್ಮ) ಆಧ್ಯಾತ್ಮಿಕತೆಯು ನಮ್ಮ ಪ್ರಸ್ತುತ ವ್ಯಕ್ತಿತ್ವವನ್ನು ಮೀರಿ ಆಳವಾದ ಅಥವಾ ಉನ್ನತ ಆಯಾಮದ ಹುಡುಕಾಟವಾಗಿದೆ.

ದಾರ್ಶನಿಕ/ ಅನ್ವೇಷಕ: ಈ ಪ್ರಪಂಚದ ಸತ್ಯಗಳನ್ನು ಹುಡುಕುವವನು. ಇದು ಋಷಿ, ಸಂತ, ಯೋಗಿ, ತತ್ವಜ್ಞಾನಿ ಇತ್ಯಾದಿ ಆಗಿರಬಹುದು.

ಒಂದು ಅಂದಾಜಿನ ಪ್ರಕಾರ ಭಾರತೀಯ ಸಂಸ್ಕೃತಿಯು ಹಲವಾರು ಸಹಸ್ರಮಾನಗಳಷ್ಟು ಹಳೆಯದು. ಒಂದು ಹಳೆಯ ಮರದಂತೆ ಹಲವು ಬೇರು, ಕೊಂಬೆಗಳನ್ನು ಹೊಂದಿದೆ. ಬೇರುಗಳು ಸಾಮಾನ್ಯ ಕಾಂಡವನ್ನು ಪೋಷಿಸುತ್ತವೆ. ಮತ್ತು ಕಾಂಡದಿಂದ ಅನೇಕ ಶಾಖೆಗಳು ಹೊರಹೊಮ್ಮುತ್ತವೆ. ಅವು ಭಾರತೀಯ ಸಂಸ್ಕೃತಿಯ ವಿಭಿನ್ನ ಅಭಿವ್ಯಕ್ತಿಗಳಾಗಿವೆ. ಆದರೆ ಅವು ಸಾಮಾನ್ಯ ಒಂದೆ ಕಾಂಡದಿಂದ ರೂಪಗೊಂಡವು.

ಈ ಶಾಖೆಗಳಲ್ಲಿ ಕೆಲವು ಕಲೆ, ಸಾಹಿತ್ಯ, ವಿಜ್ಞಾನ, ವೈದ್ಯಕೀಯ, ಧರ್ಮ, ಆಡಳಿತದ ಕಲೆ, ಸಮರ ಕಲೆಗಳು- ಇತ್ಯಾದಿಗಳ ಬಗ್ಗೆ ಇದೆ. ಮಾನವ ಜೀವನ, ಜಗತ್ತು ಇತ್ಯಾದಿಗಳ ಬಗ್ಗೆ ಒಂದೇ ರೀತಿಯ ವಿಚಾರಗಳನ್ನು ಹಂಚಿಕೊಳ್ಳುವ ಚಿಂತಕರು ಅಥವಾ **ಆಧ್ಯಾತ್ಮಿಕ ದಾರ್ಶನಿಕರ** ಗುಂಪುಗಳನ್ನು ನಾವು ಅರ್ಥೈಸುವ 'ಚಿಂತನೆಯ ಶಾಲೆಗಳು' ಸಹ ಇವೆ.

ಪುರಾತತ್ವಶಾಸ್ತ್ರಜ್ಞರು ಮತ್ತು ವಿದ್ವಾಂಸರು ಭಾರತದ ಸಾಂಸ್ಕೃತಿಕ ಬೇರುಗಳು ಸಿಂಧೂ ಅಥವಾ ಹರಪ್ಪ ಅಥವಾ ಸಿಂಧೂ-ಸರಸ್ವತಿ ನಾಗರಿಕತೆಯವರೆಗೆ ಹೋಗುತ್ತವೆ ಎನ್ನುತ್ತಾರೆ. (ಅದನ್ನು ನಾವು ಅಧ್ಯಾಯ ೬ ರಲ್ಲಿ ನೋಡಿದ್ದೇವೆ). ನಂತರ ಕಾಲದಲ್ಲಿ, ಭಾರತದಲ್ಲಿ ನೂರಾರು ಚಿಂತನಾ ಶಾಲೆಗಳ ಶಖೆಗಳು ಹೊರಹೊಮ್ಮಿದವು. ಭಾರತವನ್ನು ವಿಶಿಷ್ಟ ವ್ಯಕ್ತಿತ್ವದ ದೇಶವಾಗಿ ರೂಪಿಸಿದ ಕೆಲವು ಆರಂಭದ ಚಿಂತನಾ ಶಾಖೆಗಳನ್ನು ಇಲ್ಲಿ ನೋಡುತ್ತೇವೆ. ಅವುಗಳ ಬೇರುಗಳನ್ನು ಅರ್ಥಮಾಡಿಕೊಳ್ಳುವ ಮೂಲಕ, ನಾವು 'ಇಂಡಿಯಾ, ಅದವೇ ಭಾರತ' ಎಂಬುವುದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು.

ವೇದಗಳು ಮತ್ತು ವೈದಿಕ ಸಂಸ್ಕೃತಿ:

ಕ. ವೇದಗಳು ಯಾವುವು?

ವೇದ" ಎಂಬ ಪದವು ಸಂಸ್ಕೃತ ವಿದ್ವಾನ್ ನಿಂದ ಬಂದಿದೆ. ಅದರರ್ಥ 'ಜ್ಞಾನ' (ಉದಾ: ವಿದ್ಯಾ). ಹಿಂದಿನ ಅಧ್ಯಾಯಗಳಲ್ಲಿ ನಾವು ಋಗ್ವೇದವನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸಿದ್ದೇವೆ. ವಾಸ್ತವವಾಗಿ ನಾಲ್ಕು ವೇದಗಳಿವೆ. ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ. ಅವು ಭಾರತದ ಅತ್ಯಂತ ಪ್ರಾಚೀನ ಕೃತಿಗಳಾಗಿವೆ. ಅವು ವಿಶ್ವದ ಅತ್ಯಂತ ಪ್ರಾಚೀನ ಗ್ರಂಥಗಳಲ್ಲಿ ಒಂದಾಗಿದೆ.

ವೇದಗಳು ಸಾವಿರಾರು ಸ್ತೋತ್ರಗಳನ್ನು ಒಳಗೊಂಡಿವೆ - ಕವಿತೆಗಳು ಮತ್ತು ಹಾಡುಗಳ ರೂಪದಲ್ಲಿ ಪ್ರಾರ್ಥನೆಗಳು - ಅವುಗಳನ್ನು ಮೌಖಿಕವಾಗಿ ಪಠಿಸಲಾಗುತ್ತದೆ, ಬರೆಯಲಾಗುವುದಿಲ್ಲ. ಆ ಸ್ತೋತ್ರಗಳನ್ನು ಸಪ್ತ ಸಿಂಧವ ಪ್ರದೇಶದಲ್ಲಿ ರಚಿಸಲಾಗಿದೆ (ಇದನ್ನು ನಾವು ಅಧ್ಯಾಯ ೫ ರಲ್ಲಿ ನೋಡಿದ್ದೇವೆ). ಈ ನಾಲ್ಕರಲ್ಲಿ ಅತ್ಯಂತ ಪ್ರಾಚೀನವಾದ ಋಗ್ವೇದವನ್ನು ಖಚಿತವಾಗಿ ಯಾವಾಗ ರಚಿಸಲಾಯಿತು ಎಂದು ಹೇಳುವುದು ಕಷ್ಟ; ಸಂಶೋಧಕರು ಕ್ರಿ.ಪೂ ೫ ರಿಂದ ೨ ನೇ ಸಹಸ್ರಮಾನದವರೆಗೆ ಕಾಲವನ್ನು ಪ್ರಸ್ತಾಪಿಸಿದ್ದಾರೆ.

© NCERT not to be republished

ಆದ್ದರಿಂದ ೧೦೦ ರಿಂದ ೨೦೦ ತಲೆಮಾರುಗಳವರೆಗೆ, ಈ ಪಠ್ಯಗಳನ್ನು ಕಠಿಣ ತರಬೇತಿಯ ಮೂಲಕ ಸ್ಮರಣೆಗೆ ಬದ್ಧಗೊಳಿಸಲಾಗಿದೆ. ಯಾವುದೇ ಬದಲಾವಣೆಗಳಿಲ್ಲದೆ ಮೌಖಿಕವಾಗಿ ಮುಂದುವರೆಸಿಕೊಂಡು ಬರಲಾಗಿದೆ!

ಇದನ್ನು ತಪ್ಪಿಸಬೇಡಿ:

ಇಸಾವಿರಾರು ವರ್ಷಗಳ ಖಚಿತ ದಾಖಲೆಗಳ ಹೊಂದಿರುವ ವೈದಿಕ ಪ್ರಾರ್ಥನೆ/ಮಂತ್ರಗಳು 'ಮಾನವೀಯತೆಯ ಮೌಖಿಕ ಮತ್ತು ಅಮೂರ್ತ ಪರಂಪರೆಯ ಮೇರುಕೃತಿ' ಎಂದು ೨೦೦೨ ರಲ್ಲಿ ಯುನೆಸ್ಕೋ(UNESCO) ಏಕೆ ಗುರುತಿಸಿದೆ ಎಂಬುವುದು ಅರ್ಥವಾಗುತ್ತದೆ.

ವೈದಿಕ ಸ್ತೋತ್ರಗಳನ್ನು ಸಂಸ್ಕೃತ ಭಾಷೆಯ ಆರಂಭಿಕ ರೂಪದಲ್ಲಿ ಋಷಿಗಳು (ಪುರುಷ ಸಾಧುಗಳು ಅಥವಾ ಋಷಿಗಳು) ಮತ್ತು ಋಷಿನಿಯರು (ಸ್ತ್ರೀಯರು) ರಚಿಸಿದರು. ಅವುಗಳನ್ನು ಇಂದ್ರ, ಅಗ್ನಿ, ವರುಣ, ಮಿತ್ರ, ಸರಸ್ವತಿ, ಉಷಾ ಇನ್ನೂ ಅನೇಕ ದೇವತೆಗಳನ್ನು (ದೇವರುಗಳು ಅಥವಾ ದೇವತೆಗಳು) ಕಾವ್ಯಾತ್ಮಕ ರೂಪದಲ್ಲಿ ಸಂಬೋಧಿಸಲಾಗುತ್ತಿತ್ತು. ದೇವತೆಗಳು ಮಾನವರ ಜೀವನದಲ್ಲಿ ಮತ್ತು 'ಬ್ರಹ್ಮಾಂಡ'ದಲ್ಲಿನ ಲಯ ಅಥವಾ ಸತ್ಯದ ಸುವ್ಯವಸ್ಥೆಯನ್ನು ಋಷಿಮುನಿಗಳು ಕಂಡುಕೊಂಡರು.

ಆರಂಭಿಕ ಋಷಿಗಳು ಮತ್ತು ಋಷಿನಿಯರು ಆ ದೇವರು, ದೇವತೆಗಳನ್ನು ಪ್ರತ್ಯೇಕ ಜೀವಿಗಳಾಗಿ ನೋಡದೆ ಒಂದೇ ಎಂದು ನೋಡಿದರು. ಒಂದು ಪ್ರಸಿದ್ಧ ಸ್ತೋತ್ರವು ಹೇಳುವಂತೆ,

ಏಕಂ ಸತ್ ವಿಪ್ರ ಬಹುಧಾ ವದಂತಿ...

ಕುಳಿತನು.

ಅಸ್ತಿತ್ವವು [ಅಂದರೆ, ಸರ್ವೋಚ್ಚ ಸತ್ಯ] ಒಂದೇ,

ಆದರೆ ಋಷಿಗಳು ಅದಕ್ಕೆ ಅನೇಕ ಹೆಸರುಗಳನ್ನು ನೀಡಿದ್ದರು.

ಈ ಲೋಕದೃಷ್ಟಿಯಲ್ಲಿ ಕೆಲವು ಮೌಲ್ಯಗಳು 'ಸತ್ಯ'ದಿಂದ ಪ್ರಾರಂಭವಾಗುವ ವಿಶೇಷ ಪ್ರಾಮುಖ್ಯತೆಯನ್ನು ಪಡೆದವು. ಸತ್ಯವ ದೇವರ ಇನ್ನೊಂದು ಹೆಸರಾಗಿತ್ತು. ಋಗ್ವೇದದ ಕೊನೆಯ ಮಂತ್ರಗಳು (ಶ್ಲೋಕಗಳು) ಜನರಲ್ಲಿ ಏಕತೆಗೆ ಕರೆಯನ್ನು ನೀಡುತ್ತವೆ:

(UNESCO) ಯುನೆಸ್ಕೋ: ಯುನೆಸ್ಕೋ ಎಂದರೆ 'ಯುನೈಟೆಡ್ ನೇಷನ್ಸ್ ಎಜುಕೇಷನಲ್, ಸೈಂಟಿಫಿಕ್ ಅಂಡ್ ಕಲ್ಚರಲ್ ಆರ್ಗನೈಸೇಶನ್'. ಇದು ಶಿಕ್ಷಣ, ವಿಜ್ಞಾನ ಮತ್ತು ಸಂಸ್ಕೃತಿಯ ಮೂಲಕ ಜನರು ಮತ್ತು ರಾಷ್ಟ್ರಗಳ ನಡುವೆ ಸಂವಾದವನ್ನು ಉತ್ತೇಜಿಸುತ್ತದೆ.

ಬ್ರಹ್ಮಾಂಡ: ಜಗತ್ತು ಅಥವಾ ಬ್ರಹ್ಮಾಂಡವು ಒಂದು ಕ್ರಮಬದ್ಧ ಮತ್ತು ಸಾಮರಸ್ಯದ ವ್ಯವಸ್ಥೆಯಾಗಿ.


ಲೋಕದೃಷ್ಟಿ: ಪ್ರಪಂಚ, ಅದರ ಮೂಲ ಅಥವಾ ಅದರ ಕಾರ್ಯ ಚಟುವಟಿಕೆಗಳ ಬಗ್ಗೆ ಒಂದು ನಿರ್ದಿಷ್ಟ ದೃಷ್ಟಿಕೋನ ಅಥವಾ ನಿಲುವು.

© NCERT not to be republished

ಒಟ್ಟಾಗಿ ಬನ್ನಿ, ಒಟ್ಟಾಗಿ ಮಾತನಾಡಿ;
ನಿಮ್ಮ ಮನಸ್ಸು ಸಹಜವಾಗಿರುತ್ತದೆ. ನಿಮ್ಮ ಆಲೋಚನೆಗಳು
ಸ್ವೀಕರಿಸಿಕೊಳ್ಳಿ. ನಿಮ್ಮ ಉದ್ದೇಶವನ್ನು ಒಗ್ಗೂಡಿಸಿ, ನಿಮ್ಮ
ಹೃದಯವಿರತಿಕೆಯನ್ನು ಒಗ್ಗೂಡಿಸಿ .....
ನಿಮ್ಮ ಆಲೋಚನೆಗಳು ಒಗ್ಗಟ್ಟಾಗಿರಲಿ. ಇದನ್ನು ಎಲ್ಲರೂ ಒಪ್ಪಬಹುದು.

ಖ. ವೈದಿಕ ಸಮಾಜ

ಆರಂಭಿಕ ವೈದಿಕ ಸಮಾಜವು ವಿಭಿನ್ನ ಜನರು ಅಥವಾ 'ಕುಲಗಳಲ್ಲಿ' ಅಂದರೆ ಜನರ ದೊಡ್ಡ ಗುಂಪುಗಳಿಂದ ಕೂಡಿತ್ತು. ಋಗ್ವೇದವೊಂದೇ ಅಂತಹ ಐಂಕ್ಕೂ ಹೆಚ್ಚು ಜನಸಮುದಾಯಗಳ ಪಟ್ಟಿ ನೀಡುತ್ತದೆ- ಉದಾಹರಣೆಗೆ, ಭರತರು, ಪುರುಷರು, ಕುರುಗಳು, ಯದುಗಳು, ತುರ್ವಶರು ಇತ್ಯಾದಿ. ಪ್ರತಿಯೊಂದು ಕುಲವು ಉಪಖಂಡದ ವಾಯುವ್ಯ ಭಾಗದ ಒಂದು ನಿರ್ದಿಷ್ಟ ಪ್ರದೇಶದೊಂದಿಗೆ ನಿಕಟ ಸಂಬಂಧ ಹೊಂದಿತ್ತು



© NCERT not to be republished

ಈ ಜನರು ತಮ್ಮ ಸಮಾಜವನ್ನು ಹೇಗೆ ಆಳುತ್ತಿದ್ದರು ಎಂಬುದರ ಬಗ್ಗೆ ಹೆಚ್ಚು ಮಾಹಿತಿಯಿಲ್ಲ. ವೇದಗಳು ರಾಜ (ಆಡಳಿತಗಾರ), ಸಭಾ ಮತ್ತು ಸಮಿತಿಯಂತಹ ಪದಗಳ ಮೂಲಕ ನಮಗೆ ಕೆಲವು ಸುಳಿವುಗಳು ಮಾತ್ರ ದೊರೆಯುತ್ತವೆ. ಇವೆರಡೂ ಸಮುದಾಯಗಳು ಅಥವಾ ಸಭೆಯನ್ನು ಸೂಚಿಸುತ್ತವೆ.

ಕೃಷಿಕ, ನೇಕಾರ, ಕುಂಬಾರ, ವಡ್ಡರು, ಬಡಿಗರು, ವೈದ್ಯರು, ನರ್ತಕರು, ಕ್ಷೌರಿಕ, ಪುರೋಹಿತ ಮುಂತಾದ ಹಲವು ವೃತ್ತಿಗಳನ್ನು ವೈದಿಕ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ.

ಗುಣಪಡಿಸುವವನು: ರೋಗಗಳನ್ನು ನಿವಾರಿಸಲು ಅಥವಾ ಗುಣಪಡಿಸಲು ಸಾಂಪ್ರದಾಯಿಕ ಅಭ್ಯಾಸಗಳನ್ನು ಬಳಸುವ ವ್ಯಕ್ತಿ.

ನಾವೀಗ ಅನ್ವೇಷಿಸೋಣ

ತಮ್ಮ ನಾಯಕರನ್ನು ಆಯ್ಕೆ ಮಾಡುವ ಜನರು ಸಮಾಜದಲ್ಲಿ ಬಳಸುವ ಪದ ನಿಮಗೆ ತಿಳಿದಿದೆಯೇ? ಅಂತಹ ವ್ಯವಸ್ಥೆಯಿಂದ ಜನರು ಹೇಗೆ ಪ್ರಯೋಜನ ಪಡೆಯಬಹುದು ಎಂದು ನೀವು ಭಾವಿಸುತ್ತೀರಿ? ಅವರು ಆಯ್ಕೆ ಮಾಡದ ನಾಯಕರ ಅಡಿಯಲ್ಲಿ ಅವರು ವಾಸಿಸುತ್ತಿದ್ದರೆ ಏನಾಗಬಹುದು? (ಸುಳಿವು: 'ಆಡಳಿತ ಮತ್ತು ಪ್ರಜಾಪ್ರಭುತ್ವ' ಎಂಬ ಆಶಯದಲ್ಲಿ ನೀವು ಏನನ್ನು ಕಲಿಯುತ್ತಿದ್ದೀರಿ ಎಂಬುದನ್ನು ಹಿಂತಿರುಗಿ ಯೋಚಿಸಿ!) ನಿಮ್ಮ ಆಲೋಚನೆಗಳನ್ನು ೧೦೦-೧೫೦ ಪದಗಳ ಪ್ಯಾರಾಗ್ರಾಫ್‌ನಲ್ಲಿ ಬರೆಯಿರಿ.

ಗ. ವೈದಿಕ ಚಿಂತನೆಯ ಶಾಲೆಗಳು

ವೈದಿಕ ಸಂಸ್ಕೃತಿಯು ವೈಯಕ್ತಿಕ ಅಥವಾ ಸಮುದಾಯದ ಪ್ರಯೋಜನ ಮತ್ತು ಯೋಗಕ್ಷೇಮಕ್ಕಾಗಿ ವಿವಿಧ ದೇವತೆಗಳ (ದೇವರುಗಳು) ಮೊರೆಹೋಗುವ ಹಲವು ಆಚರಣೆಗಳನ್ನು ('ಯಜ್ಞ' ಸಾಮಾನ್ಯವಾಗಿ 'ಯಜ್ಞ' ಎಂದು ಓದಲಾಗುತ್ತದೆ) ಕಂಡುಕೊಂಡಿದ್ದರು. ದೈನಂದಿನ ಆಚರಣೆಗಳು ಸಾಮಾನ್ಯವಾಗಿ ಬೆಂಕಿಗೆ ಸಂಬಂಧಿಸಿದ ದೇವತೆಯಾದ ಅಗ್ನಿಗೆ ಪ್ರಾರ್ಥನೆ ಮತ್ತು ಅರ್ಪಣೆಗಳ ರೂಪದಲ್ಲಿದ್ದವು. ಆದರೆ ಆ ಆಚರಣೆಗಳು ಕಾಲಾಂತರದಲ್ಲಿ ಹೆಚ್ಚು ಸಂಕೀರ್ಣವಾದವು.

'ಉಪನಿಷತ್ತುಗಳು' ಎಂದು ಕರೆಯಲ್ಪಡುವ ಗ್ರಂಥಗಳ ವೈದಿಕ ಪರಿಕಲ್ಪನೆಗಳ ಮೇಲೆ ರೂಪಗೊಂಡಿವೆ. ಪುನರ್ಜನ್ಮ (ಮತ್ತೆ ಮತ್ತೆ ಹುಟ್ಟುವುದು) ಮತ್ತು ಕರ್ಮ (ನಮ್ಮ ಕೆಲಸಗಳ ಫಲಾಫಲ) ನಂತಹ ಹೊಸ ಪರಿಕಲ್ಪನೆಯನ್ನು ಪರಿಚಯಿಸಿತು. 'ವೇದಾಂತ' ಎಂದು ಕರೆಯಲ್ಪಡುವ ಚಿಂತನಾ ಪಂಥದ ಪ್ರಕಾರ 'ಎಲ್ಲವೂ ಮಾನವರ ಜೀವನ, ಪ್ರಕೃತಿ ಮತ್ತು ಬ್ರಹ್ಮಾಂಡ-ಬ್ರಹ್ಮ ಎಂದು ಕರೆಯಲ್ಪಡುವ ಒಂದು ದೈವಿಕ ರೂಪವಾಗಿದೆ. ಕೆಲವೊಮ್ಮೆ ಅದು ಕೇವಲ 'ತತ್' ಆಗಿದೆ. ಎರಡು ಪ್ರಸಿದ್ಧ ಮಂತ್ರಗಳು ಅದನ್ನು ಸರಳ ಮತ್ತು ಆಳವಾದ ರೀತಿಯಲ್ಲಿ ವ್ಯಕ್ತಪಡಿಸುತ್ತವೆ:

© NCERT not to be republished

ಅಹಂ ಬ್ರಹ್ಮಾಸ್ಮಿ

"ನಾನು ಬ್ರಹ್ಮ" (ಅಂದರೆ, ನಾನು ದೈವಿಕ)

ತತ್ ತ್ವಂ ಅಸಿ.....

"ನೀನು ಅದೇ ಆಗಿರುವೇ"

ಉಪನಿಷತ್ತುಗಳು ಆತ್ಮ ಅಥವಾ ಆತ್ಮದ ಪರಿಕಲ್ಪನೆಯನ್ನು ಸಹ ಪರಿಚಯಿಸಿದವು — ಹಾಗೆ ಪ್ರತಿ ಜೀವಿಯಲ್ಲಿ ಇರುವ ಅಂತಿಮವಾಗಿ ಬ್ರಹ್ಮನೊಂದಿಗೆ ಒಂದಾಗಿಸುವ ದೈವಿಕ ಅಂಶವಾಗಿದೆ. ಈ ಜಗತ್ತಿನಲ್ಲಿ ಎಲ್ಲವೂ ಅನ್ಯೋನ್ಯವಾಗಿ, ಪರಸ್ಪರ ಅವಲಂಬಿತವಾಗಿವೆ. ಇದು 'ಸರ್ವೇ ಭವಂತು ಸುಖಿನಾ'- "ಎಲ್ಲಾ ಜೀವಿಗಳು ಸಂತೋಷವಾಗಿರಲಿ" ಎಂದು ಆರಂಭವಾಗುವ ಸಾಮಾನ್ಯ ಪ್ರಾರ್ಥನೆಯನ್ನು ವಿವರಿಸುತ್ತದೆ. ಜೀವಾತ್ಮರು ರೋಗ ಮತ್ತು ದುಃಖದಿಂದ ಮುಕ್ತರಾಗಬೇಕೆಂದು ಹಾರೈಸುತ್ತದೆ.

ಅದರ ಕುರಿಯು ಆಲೋಚಿಸಿ

ಒಂದು ಪ್ರಮುಖ ಸಂದೇಶವನ್ನು ತಿಳಿಸುವ ಬೇರೆ ಯಾವುದೇ ಕಥೆಯನ್ನು ನೀವು ಕೇಳಿದ್ದೀರಾ ಅಥವಾ ಓದಿದ್ದೀರಾ? ಅದು ನಿಮಗೆ ಯಾವ ಮೌಲ್ಯಗಳನ್ನು ಕಲಿಸಿತು?

ಸಾ. ಶ. ಪೂ. ೧ನೇ ಸಹಸ್ರಮಾನದ ಆರಂಭದಲ್ಲಿ, ವೇದಗಳಿಂದ ಇನ್ನೂ ಹಲವಾರು ಚಿಂತನೆಯ ಪಂಥಗಳು ಹುಟ್ಟಿಕೊಂಡವು. ಅವುಗಳಲ್ಲಿ ಒಂದು ಯೋಗವಾಗಿದ್ದು, ಇದು ಒಬ್ಬರ ಪ್ರಜ್ಞೆಯಲ್ಲಿ ಬ್ರಾಹ್ಮಣನ ಸಾಕ್ಷಾತ್ಕಾರವನ್ನು ಸಾಧಿಸುವ ಉದ್ದೇಶದಿಂದ ವಿಧಾನಗಳನ್ನು ಅಭಿವೃದ್ಧಿಪಡಿಸಿತು. ಒಟ್ಟಾಗಿ, ಈ ಚಿಂತನೆಯ ಶಾಲೆಗಳು ಇಂದು ನಾವು 'ಹಿಂದೂ ಧರ್ಮ' ಎಂದು ಕರೆಯುವದಕ್ಕೆ ಕಾರಣವ ಕಾರಣವಾಯಿತ್ತು.

ಬೌದ್ಧ ಧರ್ಮ

ವೇದಗಳ ಆಲೋಚನಾಕ್ರಮವನ್ನು ಒಪ್ಪಿಕೊಳ್ಳದ, ತಮ್ಮದೇ ಆದ ಚಿಂತನೆಗಳನ್ನು ರೂಪಿಸಿಕೊಂಡ ಇತರ ಚಿಂತನಾ ಪಂಥಗಳು ಸಹ ಉದಯವಾದವು. ಅವುಗಳಲ್ಲಿ ಒಂದು ಬೌದ್ಧ ಧರ್ಮವು ಆಗಿದ್ದೆ.

ಸುಮಾರು ಎರಡೂವರೆ ಸಹಸ್ರಮಾನಗಳ ಹಿಂದೆ ಸಿದ್ಧಾರ್ಥ ಗೌತಮ ಎಂಬ ಯುವ ರಾಜಕುಮಾರನು ಲುಂಬಿನಿಯಲ್ಲಿ (ಇಂದು ಇದು ನೇಪಾಳದಲ್ಲಿದೆ)ಜನಿಸಿದನು

ಪ್ರಜ್ಞೆ: ಮನಸ್ಸಿನ ಗುಣಮಟ್ಟದ ಸ್ಥಿತಿ. ಉದಾಹರಣೆಗೆ ತನ್ನೊಳಗಿನ ಯಾವುದೋ ಒಂದು ವಿಷಯದ ಬಗ್ಗೆ ಜಾಗೃತ ರಾಗಿರುವುದು.

© NCERT not to be republished

ಉಪನಿಷತ್ತುಗಳ ಅನೇಕ ಕಥೆಗಳು ಪ್ರಶ್ನೆಗಳನ್ನು ಕೇಳುವುದರ ಮಹತ್ವವನ್ನು ಹೇಳುತ್ತವೆ, ಈ ಪ್ರಶ್ನೆಗಳು ಪುರುಷರು, ಮಹಿಳೆಯರು ಅಥವಾ ಮಕ್ಕಳಿಂದ ಬಂದಿರಲ್ಲಿ.

ಶ್ವೇತಕೇತು ಮತ್ತು ವಾಸ್ತವದ ಬೀಜ
(ಛಾದೋಗ್ಯ ಉಪನಿಷತ್ತು)

ಉದ್ದಾಲಕ ಋಷಿಯು ತನ್ನ ಮಗ ಶ್ವೇತಕೇತುವನ್ನು ವೇದಗಳನ್ನು ಕಲಿಯಲು ಗುರುಕುಲಕ್ಕೆ ಕಳುಹಿಸಿದರು. ೧೨ ವರ್ಷಗಳ ನಂತರ ಶ್ವೇತಕೇತು ಹಿಂದಿರುಗಿದಾಗ, ಅವನ ತಂದೆ ಕಲಿಕೆಯ ಬಗ್ಗೆ ತುಂಬಾ ಹೆಮ್ಮೆಪಡುವುದು ಅರಿತುಕೊಂಡನು. ಆದ್ದರಿಂದ ಉದ್ದಾಲಕನು ಬ್ರಹ್ಮದ ಸ್ವರೂಪದ ಬಗ್ಗೆ ಪ್ರಶ್ನೆಗಳನ್ನು ಕೇಳಿದನು, ಅದಕ್ಕೆ ಶ್ವೇತಕೇತುವಿಗೆ ಉತ್ತರಿಸಲು ಸಾಧ್ಯವಾಗಲಿಲ್ಲ.

ಆಲದ ಹಣ್ಣನ್ನು ಬಿಡಿಸಿ ನೋಡಿದಾಗ ಅದರ ಬೀಜವು ಮುಕ್ತವಾಗಿ ಕಾಣುವಂತೆ, ಅದು ಈಗಾಗಲೇ ಭವಿಷ್ಯದ ಆಲದ ಮರವನ್ನು ಒಳಗೊಂಡಿರುವಂತೆ, ಬ್ರಹ್ಮವು ಅಗೋಚರವಾಗಿದ್ದರೂ, ಅದು ಎಲ್ಲೆಡೆ ಹೇಗೆ ಇದೆ ಎಂಬುದನ್ನು ಉದ್ದಾಲಕನು ವಿವರಿಸಿದನು. ಒಂದೇ ಜೇಡಿಮಣ್ಣಿನಿಂದ ಎಲ್ಲಾ ರೀತಿಯ ವಿಭಿನ್ನ ಮಡಕೆಗಳನ್ನು ತಯಾರಿಸಬಹುದು. ಅಂತೆಯೇ, ನಮ್ಮ ಸುತ್ತಲಿನ ಎಲ್ಲವೂ ಒಂದೇ ಸಾರದಿಂದ ಹೊರಹೊಮ್ಮಿದೆ. ಬ್ರಹ್ಮ ತಮ್ಮ ಬೋಧನೆಯನ್ನು ಈ ಮಾತುಗಳೊಂದಿಗೆ ಮುಕ್ತಾಯಗೊಳಿಸಿದರು, "ಎಲ್ಲವೂ ಈ ಸೂಕ್ಷ್ಮ ಸಾರವನ್ನು ಒಳಗೊಂಡಿದೆ. ... ನೀನೇ ಅದು, ಶ್ವೇತಕೇತು."

ನಚಿಕೇತ ಮತ್ತು ಅವನ ಅನ್ವೇಷಣೆ
(ಕಥಾ ಉಪನಿಷತ್ತು)

ಒಮ್ಮೆ, ಒಬ್ಬ ಮನುಷ್ಯನು ತನ್ನ ಎಲ್ಲಾ ಆಸ್ತಿಗಳನ್ನು ಒಂದು ದಾನದ ಆಚರಣೆಯಲ್ಲಿ ನೀಡುತ್ತಿದ್ದನು. ಅವನ ಮಗ ನಚಿಕೇತನು ಅವನನ್ನು ಯಾವ ದೇವರಿಗೆ ಅರ್ಪಿಸಬೇಕೆಂದು ಕೇಳುತ್ತಿದ್ದಾಗ, ತಂದೆ ಕೋಪಗೊಂಡು, "ನಾನು ನಿನ್ನನ್ನು ಯಮನಿಗೆ ನೀಡುತ್ತೇನೆ" - ಅಂದರೆ ಸಾವಿನ ದೇವರಿಗೆ

ನಂತರ, ನಚಿಕೇತನು ಯಮನ ಲೋಕಕ್ಕೆ ತೆರಳಿದನು. ದೀರ್ಘ ಕಾಯುವಿಕೆಯ ನಂತರ ಶಕ್ತಿಯುತ ದೇವರನ್ನು ಭೇಟಿಯಾದನು. "ದೇಹದ ಮರಣದ ನಂತರ ಏನಾಗುತ್ತದೆ?" ಎಂದು ಅವನ ಮನಸ್ಸಿನಲ್ಲಿ ಒಂದು ಪ್ರಶ್ನೆ ಇತ್ತು - ಯಮನು ಉತ್ತರದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದನು, ಆದರೆ ಹುಡುಗ ಪಟ್ಟುಹಿಡಿದನು.

© NCERT not to be republished

ಸಂತೋಷಗೊಂಡ ಯಮನು ಆತ್ಮವು ಎಲ್ಲಾ ಜೀವಿಗಳಲ್ಲಿ ಅಡಗಿದೆ ಎಂದು ವಿವರಿಸಿದನು. ಅದು ಹುಟ್ಟುವುದೂ ಇಲ್ಲ, ಸಾಯುವುದೂ ಇಲ್ಲ; ಅದು ಅಮರವಾಗಿದೆ. ಈ ಆಳವಾದ ಜ್ಞಾನವನ್ನು ಗಳಿಸಿದ ನಂತರ, ನಚಿಕೇತನು ತನ್ನ ತಂದೆಯ ಬಳಿಗೆ ಹಿಂದಿರುಗಿದನು. ಅವರು ಅವನನ್ನು ಆದರದಿಂದ ಸ್ವಾಗತಿಸಿದರು.

ಗಾರ್ಗಿ ಮತ್ತು ಯಜ್ಞವಲ್ಕ್ಯನ ಚರ್ಚೆ
(ಬೃಹದಾರಾಣ್ಯಕ ಉಪನಿಷತ್ತು)

ಒಮ್ಮೆ, ಬುದ್ಧಿವಂತ ರಾಜ ಜನಕನು ತಾತ್ವಿಕ ಚರ್ಚೆಯಲ್ಲಿ ವಿಜೇತರಾದವರಿಗೆ ಬಹುಮಾನವನ್ನು ಘೋಷಿಸಿದನು. ಪ್ರಸಿದ್ಧ ಋಷಿಯಾದ ಯಾಜ್ಞವಲ್ಕ್ಯನು ರಾಜನ ಆಸ್ಥಾನಕ್ಕೆ ಬಂದು ಅನೇಕ ವಿದ್ವಾಂಸರನ್ನು ಸೋಲಿಸಿದನು, ಋಷಿಯಾದ ಗಾರ್ಗಿ ಅವನಿಗೆ ಪ್ರಪಂಚದ ಸ್ವರೂಪದ ಬಗ್ಗೆ ಮತ್ತು ಅಂತಿಮವಾಗಿ ಬ್ರಾಹ್ಮಣನ ಸ್ವರೂಪದ ಬಗ್ಗೆ ಸರಣಿ ಪ್ರಶ್ನೆಗಳನ್ನು ಕೇಳಿದನು. ಆ ಸಮಯದಲ್ಲಿ, ಯಾಜ್ಞವಲ್ಕ್ಯನು ಆಕೆಯನ್ನು ಹೆಚ್ಚಿನ ಪ್ರಶ್ನೆಗಳನ್ನು ಕೇಳುವುದನ್ನು ನಿಲ್ಲಿಸುವಂತೆ ಕೇಳಿಕೊಂಡನು. ಆದಾಗ್ಯೂ, ನಂತರ, ಗಾರ್ಗಿ ತನ್ನ ಪ್ರಶ್ನೆಗಳನ್ನು ಪುನರಾರಂಭಿಸಿದಳು ನಂತರ ಬ್ರಹ್ಮಾಂಡವು ಜಗತ್ತನ್ನು, ಋತುಗಳನ್ನು, ನದಿಗಳನ್ನು ಮತ್ತು ಇತರ ಎಲ್ಲವನ್ನೂ ಹೇಗೆ ಸಾಧ್ಯವಾಗಿಸುತ್ತದೆ ಎಂಬುದನ್ನು, ಯಾಜ್ಞವಲ್ಕ್ಯ ವಿವರಿಸಿದನು.

© NCERT not to be republished

ಅವರು ಬಳಸುವ ಮೂಲದಾಖಲೆಗಳನ್ನು ಅವಲಂಬಿಸಿ, ವಿದ್ವಾಂಸರು ಅವನ ಹುಟ್ಟಿದ ನಿಖರವಾದ ವರ್ಷಕ್ಕೆ ಸಂಬಂಧಿಸಿದಂತೆ ವ್ಯಾಪಕವಾಗಿ ವಿಭಿನ್ನ ತೀರ್ಮಾನಗಳಿಗೆ ಬಂದಿದ್ದಾರೆ. ಅಧ್ಯಾಯ ೪ ರಲ್ಲಿ, ನಾವು ಕ್ರಿ.ಪೂ ೫೬೦ನ್ನು ಅಂದಾಜು ವರ್ಷವಾಗಿ ಆಯ್ಕೆ ಮಾಡಿದ್ದೇವೆ. ಯಾವುದೇ ಸಂದರ್ಭದಲ್ಲಿ, ಇದು ಇಲ್ಲಿ ನಮ್ಮ ಕಥೆಗೆ ಯಾವುದೇ ವ್ಯತ್ಯಾಸವನ್ನುಂಟು ಮಾಡುವುದಿಲ್ಲ.

ಬೌದ್ಧ ಕಥೆಯ ಪ್ರಕಾರ ಸಿದ್ಧಾರ್ಥ ಗೌತಮನು ಅರಮನೆಯಲ್ಲಿ ಹೊರಜಗತ್ತು ನೋಡದೆ, ಅರಮನೆಯೊಳಗೆ ಜೀವನವನ್ನು ನಡೆಸುತ್ತಾ ಬೆಳೆದನು. ಒಂದು ದಿನ ತನ್ನ ೨೯ ನೇ ವಯಸ್ಸಿನಲ್ಲಿ, ಅವನು ಕುದುರೆ ರಥದಲ್ಲಿ ನಗರದ ಬೀದಿಯಲ್ಲಿ ಹೊರಟಿದ್ದನು. ಅವನು ಜೀವನದಲ್ಲಿ ಮೊದಲ ಬಾರಿಗೆ ಒಬ್ಬ ವೃದ್ಧ, ರೋಗಿ ಮತ್ತು ಮೃತ ದೇಹವನ್ನು ನೋಡಿದನು. ಅವನು ಒಬ್ಬ ಸಂನ್ಯಾಸಿ ಯನ್ನು ಸಹ ನೋಡಿದನು. ಈ ಮೊದಲು ಸಂತೋಷದಿಂದ, ಶಾಂತಿಯಿಂದ ಇರುತಿದ್ದ ಸಿದ್ಧಾರ್ಥನಿಗೆ ಈ ಅನುಭವದ ನಂತರ ಬದುಕಿನ ಕುರಿತು ಯೋಚನೆಯೇ ಬದಲಾಯಿತು. ಸಿದ್ಧಾರ್ಥನು ತನ್ನ ಹೆಂಡತಿ ಮತ್ತು ಮಗನನ್ನು ಬಿಟ್ಟು, ಅರಮನೆ ಜೀವನವನ್ನು ತ್ಯಜಿಸಲು ನಿರ್ಧರಿಸಿದನು. ಸಂನ್ಯಾಸಿಯಾಗಿ ಕಾಲ್ನಡಿಗೆಯಲ್ಲಿ ಪ್ರಯಾಣಿಸಿ, ಇತರ ಸನ್ಯಾಸಿಗಳು, ವಿದ್ವಾಂಸರನ್ನು ಭೇಟಿ ಮಾಡಿದನು. ಮಾನವ ಜೀವನದಲ್ಲಿನ ದುಃಖಕ್ಕೆ ಮೂಲಕಾರಣವೇನು ಎನ್ನುವುದನ್ನು ಹುಡುಕಿದನು. ಬೋಧಗಯಾದಲ್ಲಿ (ಇದಿನ ಬಿಹಾರದಲ್ಲಿದೆ) ಬೋಧಿವೃಕ್ಷ ಕೆಳಗೆ ಅನೇಕ ದಿನಗಳ ಕಾಲ ಧ್ಯಾನ ಮಾಡಿದ ನಂತರ ಜ್ಞಾನೋದಯವನ್ನು ಪಡೆದನು: ಅವಿದ್ಯೆ (ಅಜ್ಞಾನ) ಮತ್ತು ಮೋಹವು ಮಾನವನ ದುಃಖಕ್ಕೆ ಮೂಲವಾಗಿದೆ ಎಂದು ಅರಿತುಕೊಂಡನು. ಈ ಎರಡು ಸಮಸ್ಯೆಯಿಂದ ಬಿಡುಗಡೆ ಹೊಂದಲು ಒಂದು ವಿಧಾನವನ್ನು ಕಂಡುಕೊಂಡನು.

ಆದ್ದರಿಂದ, ಸಿದ್ಧಾರ್ಥನು 'ಬುದ್ಧ' ಎಂದು ಪ್ರಸಿದ್ಧನಾದನು, ಅಂದರೆ 'ಜ್ಞಾನೋದಯ' ಅಥವಾ 'ಜಾಗೃತ' ವ್ಯಕ್ತಿ ಎಂದರ್ಥ.

ಬುದ್ಧನು ತಾನಿ ಅರಿತು ಕೊಂಡಿರುವುದ್ದನ್ನು ಹಾಗು ಅಹಿಂಸೆಯ ಕಲ್ಪನೆಯನ್ನು ಒಳಗೊಂಡಂತೆ ತತ್ವಬೋಧನೆಯಲ್ಲಿ ತೊಡಗಿದನು. ಇದನ್ನು ಸಾಮಾನ್ಯವಾಗಿ 'ಅಹಿಂಸೆ' ಎಂದು ಅನುವಾದಿಸಬಹುದು. ಅದು ಮೂಲತಃ 'ನೋಯಿಸದಿರುವುದು' ಅಥವಾ ಗಾಯಗೊಳ್ಳಿಸದಿರುವುದು ಎಂಬರ್ಥಗಳನ್ನು ನೀಡುತ್ತದೆ. ಅವನು ಪ್ರಾಮಾಣಿಕವಾದ ಆಂತರಿಕ ಶಿಸ್ತಿಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದನು. ಅವರ ಈ ಕೆಳಗಿನ ಹೇಳಿಕೆಯು ಇದನ್ನು ಸರಳವಾಗಿ ವ್ಯಕ್ತಪಡಿಸುತ್ತದೆ:



ಸಂನ್ಯಾಸಿ:
ಉನ್ನತ ಪ್ರಜ್ಞೆಯನ್ನು ಪಡೆಯಲು ಕಠಿಣ ಶಿಸ್ತಿನಲ್ಲಿ ತೊಡಗಿರುವ ವ್ಯಕ್ತಿ.

ಮೋಹ:
ಸಾಮಾನ್ಯವಾಗಿ ಭಾವನೆ ಅಥವಾ ಅಭ್ಯಾಸದ ಮೂಲಕ ಯಾರೊಂದಿಗಾದರೂ ಅಥವಾ ಯಾವುದರೊಂದಿಗಾದರೂ ಬಂಧವನ್ನು ಹೊಂದುವ ಸ್ಥಿತಿ.

© NCERT not to be republished

"ಹಲವು ಜನರು ಪವಿತ್ರ ನದಿಗಳಲ್ಲಿ ಸ್ನಾನ ಮಾಡಬಹುದಾದರೂ,
ನೀರಿನಿಂದ ಶುದ್ಧವಾಗಲಾರರು.
ಆದರೆ ಸತ್ಯ ಮತ್ತು ಧರ್ಮದೊಂದಿಗೆ ಬುದುಕುವ ಪ್ರತಿಯೊಬ್ಬರು
ಪರಿಶುದ್ಧರು.

"ಯುದ್ಧಭೂಮಿಯಲ್ಲಿ ಸಾವಿರ ಜನರನ್ನು ಸಾವಿರ ಬಾರಿ
ಜಯಿಸುವುದಕ್ಕಿಂತ, ತನ್ನನ್ನು ತಾನು ಗೆಲ್ಲುವುದು, ಬಹು
ದೊಡ್ಡದು."

ಸನ್ಯಾಸಿ:
ಪ್ರಪಂಚದ ಸಾಮಾನ್ಯ ಜೀವನವನ್ನು ತ್ಯಜಿಸಿ, ಸಮರ್ಪಿಸುವ ವ್ಯಕ್ತಿ

ಧಾರ್ಮಿಕ ಅಥವಾ ಆಧ್ಯಾತ್ಮಿಕ ಅನ್ವೇಷಣೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಸನ್ಯಾಸಿಯು ಸಾಮಾನ್ಯವಾಗಿ ಪ್ರತಿಜ್ಞೆಗಳನ್ನು ತೆಗೆದುಕೊಳ್ಳುತ್ತಾನೆ, ಅಂದರೆ, ಶಿಸ್ತುಬದ್ಧ ಜೀವನಕ್ಕಾಗಿ ಕಟ್ಟುನಿಟ್ಟಾದ ನಿಯಮಗಳನ್ನು ಅನುಸರಿಸಲು ಬದ್ಧನಾಗಿರುತ್ತಾನೆ

.

ಸನ್ಯಾಸಿನಿ:
ಒಬ್ಬ ಸನ್ಯಾಸಿಗೆ ಸಮಾನವಾದ ಸ್ತ್ರೀ.

ಬುದ್ಧನು 'ಸಂಘ'ವನ್ನು ಸ್ಥಾಪಿಸಿದನು. ಇದು ಭಿಕ್ಷುಗಳು ಅಥವಾ ಸಂನ್ಯಾಸಿಗಳ (ನಂತರ, ಭಿಕ್ಷುಣಿಗಳು ಅಥವಾ ಸನ್ಯಾಸಿನಿಯರು) ಸಮುದಾಯವಾಗಿದ್ದು. ಅವರು ತಮ್ಮ ಬೋಧನೆಗಳನ್ನು ಅಭ್ಯಾಸ ಮಾಡಲು ಮತ್ತು ಪ್ರಾಚಾರ ಮಾಡಲು ತಮ್ಮನ್ನು ಸಮರ್ಪಿಸಿಕೊಂಡವರು. ಭಾರತದ ಮತ್ತು ಇಡೀ ಏಷ್ಯಾದ ಮೇಲೆ ಅವರ ಪ್ರಭಾವ ಅಗಾಧವಾಗಿತ್ತು. ಅದನ್ನು ನಾವು ಮುಂದೆ ನೋಡುತ್ತೇವೆ. ಅದು ಇಂದಿಗೂ ನಮಗೆ ಕಂಡುಬರುತ್ತದೆ.



ಸುಮಾರು ೧,೮೦೦ ವರ್ಷಗಳಷ್ಟು ಹಳೆಯದಾದ ಈ ಕಲ್ಲಿನ ಫಲಕವು ಬುದ್ಧನ ಬೋಧನೆಯನ್ನು ಚಿತ್ರಿಸುತ್ತದೆ.

© NCERT not to be republished

ನಾವೀಗ ಅನ್ವೇಷಿಸೋಣ

→ ಮೇಲಿನ ಫಲಕದಲ್ಲಿ ಬುದ್ಧನನ್ನು ಚಿತ್ರಿಸಿರುವ ರೀತಿಯನ್ನು ಚರ್ಚಿಸಿ.

→ ಬೌದ್ಧ ಧರ್ಮವು ಇಂದಿಗೂ ಪ್ರಮುಖ ಧರ್ಮವಾಗಿರುವ ಭಾರತದ ಕೆಲವು ರಾಜ್ಯಗಳನ್ನು ಅಥವಾ ಇತರ ಕೆಲವು ದೇಶಗಳನ್ನು ನೀವು ಹೆಸರಿಸಬಹುದೇ? ಇವುಗಳನ್ನು ವಿಶ್ವ ಭೂಪಟದಲ್ಲಿ ಚಿತ್ರಿಸಲು ಪ್ರಯತ್ನಿಸಿ.

ಜೈನ ಧರ್ಮ

ಜೈನ ಧರ್ಮವು ಪ್ರಾಚೀನ ಕಾಲದಲ್ಲಿ ವ್ಯಾಪಕವಾಗಿ ಹರಡಿದ ಮತ್ತೊಂದು ಪ್ರಮುಖ ಚಿಂತನೆಯ ಶಾಖೆಯಾಗಿದೆ. ಅದರ ಮೂಲಬೇರುಗಳು ಹೆಚ್ಚು ಪ್ರಾಚೀನವೆಂದು ಹೇಳಲಾಗುತ್ತದೆ. ಸಿದ್ಧಾರ್ಥ ಗೌತಮನಂತೆಯೇ, ರಾಜಕುಮಾರ ವರ್ಧಮಾನನು ಕ್ರಿ.ಪೂ ೬ನೇ ಶತಮಾನದ ಆರಂಭದಲ್ಲಿ ರಾಜಮನೆತನದಲ್ಲಿ ಜನಿಸಿದನು. ಅವರ ಜನ್ಮಸ್ಥಳವು ಆಧುನಿಕ ಬಿಹಾರದ ವೈಶಾಲಿ ನಗರದ ಬಳಿ ಇತ್ತು. ೩೦ನೇ ವಯಸ್ಸಿನಲ್ಲಿ ಮನೆಯನ್ನು ತೊರೆದು ಆಧ್ಯಾತ್ಮಿಕ ಜ್ಞಾನವನ್ನು ಹುಡುಕಲು ನಿರ್ಧರಿಸಿದನು. ಅವರು ಶಿಸ್ತಿನಿಂದ ತಪಸ್ಸನ್ನು ಅಭ್ಯಾಸ ಮಾಡಿದರು. ೧೨ ವರ್ಷಗಳ ನಂತರ, 'ಅನಂತ ಜ್ಞಾನ' ಅಥವಾ ಅತ್ಯುನ್ನತ ಬುದ್ಧಿವಂತಿಕೆಯನ್ನು ಸಾಧಿಸಿದನು. ಅವರು 'ಮಹಾವೀರ' ಅಥವಾ 'ಮಹಾನ್ ನಾಯಕ' ಎಂದು ಪ್ರಸಿದ್ಧರಾದರು. ಮತ್ತು ಅವರು ಅರಿತುಕೊಂಡ ಧರ್ಮ ತತ್ವಗಳನ್ನು ಬೋಧಿಸಲು ಪ್ರಾರಂಭಿಸಿದರು.



ಮಹಾವೀರನ ಸಾಂಪ್ರದಾಯಿಕ ಚಿತ್ರಕಲೆ

ಇದನ್ನು ತಪ್ಪಿಸಬೇಡಿ

"ಜೈನ್ ಅಥವಾ ಜೈನ ಎಂಬ ಪದವು 'ಜಿನ' ಎಂಬ ಪದದಿಂದ ಬಂದಿದೆ. ಅದರರ್ಥ 'ಜಯಶಾಲಿ'. ಅದು ಭೂಪ್ರದೇಶ ಅಥವಾ ಶತ್ರುಗಳ ವಿರುದ್ಧದ ವಿಜಯವನ್ನು ಸೂಚಿಸುವುದಿಲ್ಲ, ಅದು ಜ್ಞಾನೋದಯವನ್ನು ತಲುಪಲು ಅಜ್ಞಾನ ಮತ್ತು ಜೀವನದ ಬಂಧನಗಳನ್ನು ಗೆಲ್ಲುವುದನ್ನು ಸೂಚಿಸುತ್ತದೆ.

ಜೈನ ಬೋಧನೆಗಳಲ್ಲಿ ಅಹಿಂಸೆ, ಅನೇಕಾಂತವಾದ ಮತ್ತು ಅಪರಿಗ್ರಹ ಮೂಲತತ್ವಗಳಾಗಿ ಸೇರಿವೆ. ಬೌದ್ಧ ಧರ್ಮ ಮತ್ತು ವೇದಾಂತ ಚಿಂತನೆಯ ಪಂಥದೊಂದಿಗೆ ಬಹುಮಟ್ಟಿಗೆ

© NCERT not to be republished

ಹೊಂದಿಕೊಂಡಿರುವ ಈ ವಿಚಾರಗಳು ಭಾರತೀಯ ಸಂಸ್ಕೃತಿಯ ಕೇಂದ್ರಬಿಂದುವಾಗಿವೆ. ಮೊದಲನೆಯದನ್ನು ಮಹಾವೀರನ ಈ ಮಾತಿನಿಂದ ವಿವರಿಸಬಹುದು:

"ಉಸಿರಾಡುವ, ಅಸ್ತಿತ್ವದಲ್ಲಿರುವ, ಜೀವಂತ, ಸಂವೇದನಾಶೀಲ
ಜೀವಿಗಳನ್ನು ಕೊಲ್ಲಬಾರದು, ಹಿಂಸೆಯಿಂದ ನಡೆಸಿಕೊಳ್ಳಬಾರದು,
ನಿಂದಿಸಬಾರದು, ಪಿಡಿಸಬಾರದು ಅಥವಾ ಓಡಿಸಬಾರದು."

ಕೊನೆಯ ಎರಡನ್ನು ಸರಳ ಪದಗಳಲ್ಲಿ ವ್ಯಾಖ್ಯಾನಿಸೋಣ:

- ಅನೇಕಾಂತವಾದ ಎಂದರೆ ಕೇವಲ ಒಂದು ಅಂಶವಲ್ಲ ಅಥವಾ ಹಲವು ದೃಷ್ಟಿಕೋನ. ಅಂದರೆ ಸತ್ಯವು ಅನೇಕ ಅಂಶಗಳನ್ನು ಹೊಂದಿದೆ. ಯಾವುದೇ ಒಂದು ಹೇಳಿಕೆಯಿಂದ ಸಂಪೂರ್ಣವಾಗಿ ವಿವರಿಸಲು ಸಾಧ್ಯವಿಲ್ಲ.
- ಅಪರಿಗ್ರಹ ಎಂದರೆ 'ದೂರಾಸೆ ಹೊಂದದೇ ಇರುವುದು'. ಭೌತಿಕ ವಸ್ತುಗಳಿಂದ ದೂರವಿರಲು ಸಲಹೆ ನೀಡುತ್ತದೆ. ಜೀವನದಲ್ಲಿ ನಿಜವಾಗಿಯೂ ಅಗತ್ಯವಾದದ್ದಕ್ಕೆ ತನ್ನನ್ನು ಸೀಮಿತಗೊಳಿಸುತ್ತದೆ.

ಜೈನ ಧರ್ಮವು ಮಾನವರಿಂದ ಅಗೋಚರ ಜೀವಿಗಳವರೆಗೆ ಎಲ್ಲಾ ಜೀವಿಗಳ ನಡುವೆ ಇರುವ ಪರಸ್ಪರ ಸಂಬಂಧ ಮತ್ತು ಅವಲಂಬನೆಯನ್ನು ಒತ್ತಿಹೇಳುತ್ತದೆ. ಏಕೆಂದರೆ ಅವು ಪರಸ್ಪರ ಬೆಂಬಲಿಸುತ್ತವೆ. ಪರಸ್ಪರರಿಲ್ಲದೆ ಬದುಕಲು ಸಾಧ್ಯವಿಲ್ಲ. ಪ್ರಕೃತಿ, ಸಸ್ಯ ಮತ್ತು ಪ್ರಾಣಿಗಳನ್ನು ಅಧ್ಯಯನ ಮಾಡುವ ವಿಜ್ಞಾನಿಗಳು ಈ ಆಳವಾದ ಸತ್ಯವನ್ನು ಮತ್ತೆ ಮತ್ತೆ ದೃಢಪಡಿಸಿದ್ದಾರೆ.

ಜಾತಕ ಕಥೆಗಳು: ಭಾರತೀಯ ಮಕ್ಕಳು ಮತ್ತು ಹಿರಿಯ ತಲೆಮಾರುಗಳನ್ನು ಸಂತೋಷಗೊಳಿಸಿರುವ ಜಾತಕ ಕಥೆಗಳು ಬುದ್ಧನ ಹಿಂದಿನ ಜನ್ಮಗಳ ಕಥೆಗಳನ್ನು ಹೇಳುತ್ತವೆ. ಬೌದ್ಧಧರ್ಮದ ಮೌಲ್ಯಗಳನ್ನು ಸರಳವಾಗಿ ವ್ಯಕ್ತಪಡಿಸುತ್ತವೆ.

ಜನಪ್ರಿಯ ಕಥೆಯಲ್ಲಿ ಬುದ್ಧನು ಕೋತಿಗಳ ದೊಡ್ಡ ಗುಂಪಿನ ರಾಜನಾಗಿದ್ದನು. ಅವನು ದೈವಿಕ ಪರಿಮಳ ಮತ್ತು ರುಚಿಯ ಹಣ್ಣುಗಳನ್ನು ನೀಡುವ ದೊಡ್ಡ ಮರದ ಬಳಿ ವಾಸಿಸುತ್ತಿದ್ದನು. ಯಾವುದೇ ಹಣ್ಣು ಕೈಜಾರಿ ಹೋಗಬಾರದೆಂದು ಕೋತಿರಾಜನ ಸೂಚನೆಯ ಹೊರತಾಗಿಯೂ, ಒಂದು ದಿನ ಮಾಗಿದ ಹಣ್ಣು ಕೆಳಗಿರುವ ಹೊಳೆಗೆ ಬಿದ್ದಿತು. ಪ್ರವಾಹದಲ್ಲಿ ತೇಲಿಬರುತ್ತಿದ್ದ ಅದನ್ನು ಬಲೆಯಲ್ಲಿ ಹಿಡಿದು ಅರಮನೆಗೆ ಕರೆದೊಯ್ಯಲಾಯಿತು. ರಾಜನು ಅದರ ರುಚಿಯಿಂದ ಎಷ್ಟು ಅಚ್ಚರಿಗೊಂಡನೆಂದರೆ,

© NCERT not to be republished

ಅದು ಯಾವ ಮರದ ಹಣ್ಣು ಕಂಡುಹಿಡಿಯಲು ತನ್ನ ಸೈನಿಕರಿಗೆ ಆದೇಶವನ್ನು ನೀಡಿದನು.

ದೀರ್ಘ ಹುಡುಕಾಟದ ನಂತರ, ಅವರು ಮರವನ್ನು ಕಂಡುಹಿಡಿದರು. ಕೋತಿಗಳು ಆ ಮರದ ಹಣ್ಣುಗಳನ್ನು ಆನಂದದಿಂದ ತಿನ್ನುತಿದ್ದವು. ಇದನ್ನು ಕಂಡ ಸೈನಿಕರು ಕೋತಿಗಳ ಮೇಲೆ ದಾಳಿ ಮಾಡಿದರು. ಕೋತಿರಾಜನಿಗೆ ತನ್ನ ಕೋತಿಗಳನ್ನು ಉಳಿಸುವ ಏಕೈಕ ಮಾರ್ಗವೆಂದರೆ ಹೊಳೆಯನ್ನು ದಾಟಲು ಸಹಾಯ ಮಾಡುವುದು. ಅವರು ಅದನ್ನು ತಾವಾಗಿಯೇ ದಾಟಲು ಸಾಧ್ಯವಿರಲಿಲ್ಲ. ಅವರಿಗಿಂತ ದೊಡ್ಡದಾಗಿದ್ದ ಕೋತಿ-ರಾಜನು ಇನ್ನೊಂದು ದಡದಲ್ಲಿದ್ದ ಮರವನ್ನು ಹಿಡಿದು ಹೊಳೆಯನ್ನು ದಾಟಲು ತನ್ನ ದೇಹವನ್ನು ಸೇತುವೆಯಾಗಿ ಬಳಸಲು [redacted] ಅವನು ತೀವ್ರವಾಗಿ ಗಾಯಗೊಂಡು ಅಂತಿಮವಾಗಿ ಸಾವನ್ನಪ್ಪಿದನು.

ದೂರದಿಂದ ಈ ದೃಶ್ಯವನ್ನು ವೀಕ್ಷಿಸಿದ ರಾಜನು ಕೋತಿರಾಜನ ನಿಸ್ವಾರ್ಥ ತ್ಯಾಗದಿಂದ ಬಹಳ ಪ್ರಭಾವಿತನಾದನು. ಅವನು ತನ್ನ ಪ್ರಜೆಗಳಿಗೆ ಸಂಬಂಧಿಸಿದಂತೆ ರಾಜನ ಪಾತ್ರದ ಬಗ್ಗೆ ಚಿಂತಿಸಿದನು.

ಕೋತಿ-ರಾಜನ ಕಥೆಯನ್ನು ಚಿತ್ರಿಸುವ ಕಲ್ಲಿನ ಫಲಕ (ಮಧ್ಯಪ್ರದೇಶದ ಭರ್ಹತ್ ನಲ್ಲಿ)

ಒಂದು ಜೈನ ಕಥೆ

ರೋಹಿಣ್ಯನು ಅಸಾಧಾರಣ ಪ್ರಚಂಡ ಕಳ್ಳನಾಗಿದ್ದನು. ಅವನನ್ನು ಹಿಡಿಯುವ ಎಲ್ಲಾ ಪ್ರಯತ್ನಗಳು ವಿಫಲವಾಗಿದ್ದವು. ಒಂದು ನಗರಕ್ಕೆ ಹೋಗುವಾಗ ಅಜ್ಞಾನದ ಸಾಮಾನ್ಯ ಜೀವನದಿಂದ ಮುಕ್ತಿಯನ್ನು ಸಾಧಿಸುವ ಬಗ್ಗೆ ಮಹಾವೀರನು ನೀಡುತ್ತಿದ್ದ ಧರ್ಮೋಪದೇಶದ ಕೆಲವು ವಾಕ್ಯಗಳನ್ನು ಆಕಸ್ಮಿಕವಾಗಿ ಕೇಳಿದನು. ನಗರವನ್ನು ತಲುಪಿದ ರೋಹಿಣ್ಯನನ್ನು ಗುರುತಿಸಿ ಬಂಧಿಸಲಾಯಿತು. ಅವನು ಒಬ್ಬ ಸರಳ ರೈತನಂತೆ ನಟಿಸಿದನು. ಒಬ್ಬ ಮಂತ್ರಿಯು ತನ್ನ ಗುರುತನ್ನು ಒಪ್ಪಿಕೊಳ್ಳುವಂತೆ ಒತ್ತಾಯಿಸಲು [redacted] ಮಾತುಗಳನ್ನು ನೆನಪಿಸಿಕೊಂಡು, ಮಂತ್ರಿಯ ಯೋಜನೆಯನ್ನು ಕಂಡುಹಿಡಿದು ಅವನನ್ನು ಸೋಲಿಸಲು ಸಾಧ್ಯವಾಯಿತು.

ಪಶ್ಚಾತ್ತಾಪಪಟ್ಟ ರೋಹಿಣ್ಯನು ಮಹಾವೀರನ ಬಳಿಗೆ ಹೋಗಿ, ತನ್ನ ಅಪರಾಧಗಳನ್ನು ಒಪ್ಪಿಕೊಂಡನು. ಕದ್ದ ಸಂಪತ್ತನ್ನು ಹಿಂದಿರುಗಿಸಿ ಕ್ಷಮೆಯನ್ನು ಕೇಳಿದನು. ಅವನು ಸನ್ಯಾಸತ್ವವನ್ನು ಸ್ವೀಕರಿಸಿದನು. ಅವನು ಬದುಕುತಿದ್ದ ಭ್ರಮೆಯನ್ನು ಅರಿತುಕೊಂಡನು. ಉನ್ನತ ಜ್ಞಾನವನ್ನು ಗಳಿಸುವತ್ತ ಗಮನ ಹರಿಸಿದನು.

ಈ ಕಥೆಯು ಸರಿಯಾದ ಕೆಲಸ ಮತ್ತು ಚಿಂತನೆಯ ಮಹತ್ವವನ್ನು ವಿವರಿಸುತ್ತದೆ. ಪ್ರತಿಯೊಬ್ಬರಿಗೂ ಎರಡನೇ ಅವಕಾಶ ಇರಬೇಕು ಎಂಬ ಅಂಶವನ್ನು ಸಹ ವಿವರಿಸುತ್ತದೆ.

© NCERT not to be republished



ನಾವೀಗ ಅನ್ವೇಷಿಸೋಣ

ಮೇಲಿನ ಫಲಕವನ್ನು ಗಮನಿಸಿ (ನವದೆಹಲಿಯ ಜೈನ ದೇವಾಲಯದಿಂದ). ಅದು ಯಾವ ಗಮನಾರ್ಹವಾದ ವಿಷಯವನ್ನು ಹೊಂದಿದ್ದೆ? ಇದು ಯಾವ ಸಂದೇಶಗಳನ್ನು ನೀಡುತ್ತದೆ?

ಇದರ ಕುರಿತು ಅಲೋಚಿಸಿ:

ಬೌದ್ಧ ಮತ್ತು ಜೈನ ಧರ್ಮಗಳೆರಡರಲ್ಲೂ ಅಹಿಂಸೆ ಎಂದರೆ ಒಬ್ಬ ವ್ಯಕ್ತಿ ಅಥವಾ ಪ್ರಾಣಿಯ ವಿರುದ್ಧ ದೈಹಿಕ ಹಿಂಸೆಯಿಂದ ದೂರವಿರುವುದು. ಇದರರ್ಥ ಯಾರೊಂದಿಗೂ ಕೆಟ್ಟ ಭಾವನೆಗಳನ್ನು ಹೊಂದಿರುವಂತಹ ಆಲೋಚನೆಗಳಿಂದ, ಹಿಂಸೆಯಿಂದ ದೂರವಿರುವುದು. ನಾವು ನಮ್ಮನ್ನು ಎಚ್ಚರಿಕೆಯಿಂದ ಗಮನಿಸಿದರೆ, ನಾವು ಅಂತಹ ನಕಾರಾತ್ಮಕ ಆಲೋಚನೆಗಳನ್ನು ಗಮನಿಸಬಹುದು. ಅವುಗಳನ್ನು ಸಕಾರಾತ್ಮಕವಾಗಿ ಪರಿವರ್ತಿಸಲು ಕಲಿಯಬಹುದು. ಕೆಲವೊಮ್ಮೆ ಅಂತಹ ನಕಾರಾತ್ಮಕ ಆಲೋಚನೆಗಳು ನಮ್ಮ ಮೇಲೆಯೇ ಪರಿಣಾಮ ಬೀರುತ್ತವೆ!

ಬೌದ್ಧ ಮತ್ತು ಜೈನ ಧರ್ಮಗಳ ಸನ್ಯಾಸಿಗಳು, ಕೆಲವೊಮ್ಮೆ ಸನ್ಯಾಸಿನಿಯರು ಸಹ ತಮ್ಮ ಬೋಧನೆಗಳನ್ನು ದೂರದೂರಕ್ಕೆ ಪ್ರಚಾರ ಮಾಡಲು ಹಲವೆಡೆಗೆ ಪ್ರಯಾಣಿಸಲು ಪ್ರಾರಂಭಿಸಿದರು. ಅವರಲ್ಲಿ ಕೆಲವರು ದೂರದ ಸ್ಥಳಗಳಲ್ಲಿ ಹೊಸ ಧರ್ಮಕೇಂದ್ರಗಳನ್ನು ಸ್ಥಾಪಿಸಿದರು. ಮತ್ತುಳಿದ ಕೆಲವರು ಬಂಡೆಯಲ್ಲಿ ಕತ್ತರಿಸಿದ ಗುಹೆಗಳಲ್ಲಿ ಸಂನ್ಯಾಸಿ ಜೀವನವನ್ನು ನಡೆಸಿದರು. ಪುರಾತತ್ವ ಸಂಶೋಧನೆಗಳು ಆ ಧರ್ಮಕೇಂದ್ರಗಳ ಕುರುಹುಗಳನ್ನು ಬಹಿರಂಗಪಡಿಸಿವೆ. ಕೆಲವೊಮ್ಮೆ ಬಂಡೆಯಿಂದ ಕತ್ತರಿಸಿದ ಗುಹೆಗಳಲ್ಲಿ ವಾಸಿಸುತ್ತಿದ್ದ ಮತ್ತು ಕಲ್ಲಿನ ಹಾಸಿಗೆಗಳ ಮೇಲೆ ಮಲಗಿದ ಸನ್ಯಾಸಿಗಳ ಹೆಸರುಗಳು ಸಹ ಕಂಡುಬರುತ್ತವೆ!

© NCERT not to be republished



ಕ್ರಿ.ಶ. ೬ ಮತ್ತು ೧೦ ನೇ ಶತಮಾನಗಳ ನಡುವೆ ಎಲ್ಲೋರಾದಲ್ಲಿ (ಮಹಾರಾಷ್ಟ್ರ) ಬಂಡೆಯಲ್ಲಿ ಕತ್ತರಿಸಿದ ಗುಹೆಗಳು. ಕೆಲವು ಗುಹೆಗಳು ಹಿಂದೂ ಗುಹೆಗಳಾಗಿವೆ, ಇನ್ನುಳಿದವು ಬೌದ್ಧ ಮತ್ತು ಜೈನ ಗುಹೆಗಳಾಗಿವೆ.

ಅದರ ಕುರಿತು ಆಲೋಚಿಸಿ

ಇಂಗ್ಲಿಷ್ ನಲ್ಲಿ, ಹಿಂದೂ ಧರ್ಮ, ಬೌದ್ಧ ಧರ್ಮ, ಜೈನ ಧರ್ಮ ಮತ್ತು ಸಿಖ್ ಧರ್ಮವನ್ನು ಹೆಚ್ಚಾಗಿ 'ಧರ್ಮಗಳು' ಎಂಬ ಹಣೆಪಟ್ಟಿಯನ್ನು ಕಟ್ಟಲಾಗಿದೆ. ನಾವು ಈ ಪದವನ್ನು ಕೈಬಿಟ್ಟು 'ಚಿಂತನೆಯ ಶಾಖೆಗಳು' ಮತ್ತು (ನಂತರ ಈ ಅಧ್ಯಾಯದಲ್ಲಿ) 'ನಂಬಿಕೆ ವ್ಯವಸ್ಥೆಗಳಿಗೆ' ಮಹತ್ವ ನೀಡಿದ್ದೇವೆ ಎಂದು ಗಮನಿಸಬಹುದು. ಏಕೆಂದರೆ ಆ ಶಾಖೆಗಳಲ್ಲಿ ವ್ಯವಸ್ಥೆಯ ಹಲವು ಅಂಶಗಳಿವೆ. ಅವುಗಳನ್ನು ನಾವು ಕ್ರಮೇಣ ತಿಳಿಯುತ್ತೇವೆ. ಕೆಲವು ಹೆಸರುಗಳೆಂದರೆ- ತಾತ್ವಿಕ ಅಂಶ, ಆಧ್ಯಾತ್ಮಿಕ ಅಂಶ, ಧಾರ್ಮಿಕ ಅಂಶ, ನೈತಿಕ ಅಂಶ, ಸಾಮಾಜಿಕ ಅಂಶ,. ಭಾರತೀಯ ನಾಗರಿಕತೆಯ ಸಂದರ್ಭದಲ್ಲಿ 'ಧರ್ಮ' ಎಂಬ ಪದವು ತುಂಬಾ ಸೀಮಿತವಾಗಿದೆ ಎಂದು ಅನೇಕ ವಿದ್ವಾಂಸರು ಒಪ್ಪುತ್ತಾರೆ.

ಪ್ರಾಚೀನ ಕಾಲದಲ್ಲಿ ಇನ್ನೂ ಅನೇಕ ಚಿಂತನಾ ಪಂಥಗಳಿದ್ದವು. ಉದಾಹರಣೆಗೆ ಅವುಗಳಲ್ಲಿ ಒಂದು 'ಚಾರ್ವಾಕ' ಪಂಥವಾಗಿದ್ದು (ಕೆಲವೊಮ್ಮೆ 'ಲೋಕಾಯತ' ಎಂದೂ ಕರೆಯಲ್ಪಡುತ್ತದೆ) ಇದು ಕೇವಲ ಭೌತಿಕ ಜಗತ್ತು ಮಾತ್ರ ಅಸ್ತಿತ್ವದಲ್ಲಿದೆ ಎಂದು ಹೇಳುತ್ತದೆ, ಆದ್ದರಿಂದ ಸಾವಿನ ನಂತರ ಜೀವನವಿಲ್ಲ ಎಂಬುದು ಅದರ ನಂಬಿಕೆ ಆಗಿದ್ದೆ. ಈ ಶಾಖೆಯು ಹೆಚ್ಚು ಜನಪ್ರಿಯತೆಯನ್ನು ಪಡೆದಂತೆ ತೋರುವುದಿಲ್ಲ. ಇದು ಕಾಲಾಂತರದಲ್ಲಿ ಕಣ್ಮರೆಯಾಯಿತು.ಬೌದ್ಧಿಕ ಅಥವಾ ಆಧ್ಯಾತ್ಮಿಕ ನಂಬಿಕೆ ವ್ಯವಸ್ಥೆಗಳಲ್ಲಿ ವ್ಯಾಪಕವಾದ ವೈವಿಧ್ಯವಿತ್ತು ಎಂಬುದನ್ನು ತೋರಿಸಲು ನಾವು ಇದನ್ನು ಉಲ್ಲೇಖಿಸುತ್ತೇವೆ; ಇಲ್ಲಿ ಜನರು ತಮಗೆ ಸೂಕ್ತವಾದದ್ದನ್ನು ಆಯ್ಕೆ ಮಾಡಲು ಸ್ವತಂತ್ರರಾಗಿದ್ದರು.

© NCERT not to be republished

ವೈದಿಕ, ಬೌದ್ಧ ಮತ್ತು ಜೈನ ಪಂಥಗಳು ಪ್ರಮುಖ ವ್ಯತ್ಯಾಸಗಳನ್ನು ಹೊಂದಿದ್ದರೂ- ಅವು ಧರ್ಮ, ಕರ್ಮ, ಪುನರ್ಜನ್ಮ, ದುಃಖ ಮತ್ತು ಅಜ್ಞಾನ, ಮುಕ್ತಿಯ ಹುಡುಕಾಟದಂತಹ ಪ್ರಮುಖ ಮೌಲ್ಯಗಳು ಎಲ್ಲಾ ಪಂಥಗಳಲ್ಲಿ ಕೆಲವು ಸಾಮಾನ್ಯ ಪರಿಕಲ್ಪನೆಯಂತೆ ಇದ್ದವು. ಇದನ್ನು ನಾವು ಈ ಅಧ್ಯಾಯವನ್ನು ಪ್ರಾರಂಭಿಸಿದ ಮರದ 'ಮೂಲಬೇರು'. ರೂಪದಲ್ಲಿ ನೋಡಿದ್ದೇವೆ'.

ಜಾನಪದ ಮತ್ತು ಬುಡಕಟ್ಟು ಬೇರುಗಳು

ನಾವು ಇಲ್ಲಿಯವರೆಗೆ ನೋಡಿದ ಸಾಂಸ್ಕೃತಿಕ ಬೇರುಗಳನ್ನು ಹಲವು ಪಠ್ಯಗಳಲ್ಲಿ ಚೆನ್ನಾಗಿ ದಾಖಲಿಸಲಾಗಿದೆ. ಭಾರತವು ಶ್ರೀಮಂತ 'ಮೌಖಿಕ ಸಂಪ್ರದಾಯಗಳನ್ನು' ಹೊಂದಿದೆ. ಅಂದರೆ ಲಿಖಿತ ಪಠ್ಯಗಳಿಲ್ಲದೆ ದೈನಂದಿನ ಅಭ್ಯಾಸದ ಮೂಲಕ ಪ್ರಸಾರವಾಗುವ ಬೋಧನೆಗಳು ಅಭ್ಯಾಸ ಬಲದಿಂದ ಸಾಗಿಬಂದಿವೆ. (ವೇದಗಳ ವಿಷಯ). ಅವುಗಳಲ್ಲಿ ಹಲವಾರು ಜಾನಪದ ಸಂಪ್ರದಾಯಗಳಿವೆ. ಅಂದರೆ ಸಾಮಾನ್ಯ ಜನರಿಂದ ಪ್ರಸಾರವಾಗುವ ಬುಡಕಟ್ಟು ಸಂಪ್ರದಾಯಗಳು, ಅದೇ ಜನಾಂಗದವರಿಂದ ಹರಡಲ್ಪಟ್ಟ ಬುಡಕಟ್ಟು ಸಂಪ್ರದಾಯಗಳಾಗಿ ಮುಂದುವರೆದುಕೊಂಡು ಬಂದವು.

ಬುಡಕಟ್ಟು ಎಂದರೇನು?

ಈ ಸಾಮಾಜಿಕ ಘಟಕಕ್ಕೆ ಹಲವು ವ್ಯಾಖ್ಯಾನಗಳಿವೆ. ಮಾನವಶಾಸ್ತ್ರಜ್ಞರು ಸಮಾನ ಬುಡಕಟ್ಟು ಜನಾಂಗವನ್ನು ಸಾಮಾನ್ಯ ವಂಶಾವಳಿ, ಸಂಸ್ಕೃತಿ ಮತ್ತು ಭಾಷೆಯ ಸಂಪ್ರದಾಯವನ್ನು ಹಂಚಿಕೊಳ್ಳುವ ಕುಟುಂಬಗಳ ಅಥವಾ ಕುಲಗಳ ಗುಂಪು ಎಂದು ಪರಿಗಣಿಸುತ್ತಾರೆ. ಬುಡಕಟ್ಟು ನಾಯಕರ ಅಡಿಯಲ್ಲಿ ನಿಕಟವಾದ ಸಮುದಾಯವಾಗಿ ವಾಸಿಸುತ್ತಾರೆ. ಯಾವುದೇ ಖಾಸಗಿ ಆಸ್ತಿಯನ್ನು ಹೊಂದಿರುವುದಿಲ್ಲ.

ಕುತೂಹಲಕಾರಿ ಸಂಗತಿಯೆಂದರೆ ಪ್ರಾಚೀನ ಭಾರತದಲ್ಲಿ 'ಬುಡಕಟ್ಟು' ಎಂಬ ಪದ ಬಳಕೆ ಕಂಡುಬರುವುದಿಲ್ಲ. 'ಜನ (ಜನಪದಗಳು) ಎಂಬ ಪದಬಳಕೆ ಇದ್ದಿತು. ಈ ಜನಾಂಗದವರು ಕಾಡುಗಳ ಅಥವಾ ಗುಡ್ಡಗಾಡುಗಳಂತ ನಿರ್ದಿಷ್ಟ ಪರಿಸರದಲ್ಲಿ ವಾಸಿಸುತ್ತಿದ್ದ ವಿಭಿನ್ನ ಜನರಾಗಿದ್ದರು. ಭಾರತದ ಸಂವಿಧಾನವು ಇಂಗ್ಲಿಷ್ ನಲ್ಲಿ 'ಟ್ರೈಬ್ಸ್' ಮತ್ತು 'ಟ್ರೈಬಲ್ ಕಮ್ಯುನಿಟಿ' ಎಂದೂ, ಹಿಂದಿಯಲ್ಲಿ 'ಜನಜಾತಿ/ಜಂಜಾತಿ' ಎಂಬ ಪದಗಳನ್ನು ಬಳಸಲಾಗಿದೆ.

ಅಧಿಕೃತ ಅಂಕಿಅಂಶಗಳ ಪ್ರಕಾರ, ೨೦೧೧ ರಲ್ಲಿ ಭಾರತವು ಹೆಚ್ಚಿನ ರಾಜ್ಯಗಳಲ್ಲಿ ೭೫ ಬುಡಕಟ್ಟು ಜನಾಂಗಗಳನ್ನು ಹೊಂದಿತ್ತು. ಅದು ಸುಮಾರು ೧೦೪ ಮಿಲಿಯನ್ ಜನಸಂಖ್ಯೆಯಾಗಿದೆ. ಇದು ಆಸ್ಟ್ರೇಲಿಯಾ ಮತ್ತು ಯುನೈಟೆಡ್ ಕಿಂಗಡಮ್ (ಯು.ಕೆ) ಜನಸಂಖ್ಯೆಗಿಂತ ಹೆಚ್ಚಾಗಿದೆ.

೧೯ ನೇ ಶತಮಾನದಲ್ಲಿ ಬುಡಕಟ್ಟುಗಳನ್ನು ಅಧ್ಯಯನ ಮಾಡುವ ಮಾನವಶಾಸ್ತ್ರಜ್ಞರು ಅವರನ್ನು ನಾಗರಿಕ ಜನರಿಗಿಂತ 'ಪ್ರಾಚೀನರು' ಅಥವಾ 'ಕೆಳಮಟ್ಟದವರು' ಎಂದು ಬಣ್ಣಿಸಿದರು. ಬುಡಕಟ್ಟು ಸಮುದಾಯಗಳು ಮತ್ತು ಅವರ ಶ್ರೀಮಂತ ಮತ್ತು ಸಂಕೀರ್ಣ ಸಂಸ್ಕೃತಿಗಳ ಆಳವಾದ ಅಧ್ಯಯನಗಳೊಂದಿಗೆ, ಅಂತಹ ಪಕ್ಷಪಾತದ ನಿರ್ಣಯಗಳನ್ನು ಈಗ ಕೈಬಿಡಲಾಗಿದೆ

© NCERT not to be republished

ಈ ಅಧ್ಯಾಯದಲ್ಲಿ ನಾವು ಉಲ್ಲೇಖಿಸಿದಂತಹ ಜಾನಪದ ಮತ್ತು ಬುಡಕಟ್ಟು ಸಂಪ್ರದಾಯಗಳು ಹಾಗೂ ಪ್ರಮುಖ ಚಿಂತನೆಯ ಶಾಖೆಗಳ ನಡುವೆ ನಿರಂತರ ಸಂಪರ್ಕವಿತ್ತು. ದೇವತೆ, ಪರಿಕಲ್ಪನೆ, ದಂತಕಥೆ ಮತ್ತು ಆಚರಣೆಗಳನ್ನು ಎರಡೂ ದಿಕ್ಕುಗಳಲ್ಲಿ ಮುಕ್ತವಾಗಿ ವಿನಿಮಯ ಮಾಡಿಕೊಳ್ಳಲಾಗಿದೆ. ಉದಾಹರಣೆಗೆ ಸಂಪ್ರದಾಯದ ಪ್ರಕಾರ ಪುರಿ(ಒಡಿಶಾ)ಯಲ್ಲಿ ಪೂಜಿಸಲ್ಪಡುವ ಜಗನ್ನಾಥನು ಮೂಲತಃ ಬುಡಕಟ್ಟು ದೇವತೆಯಾಗಿದ್ದನು. ಭಾರತದಾದ್ಯಂತ ಪೂಜಿಸಲ್ಪಡುವ ಮಾತೃದೇವತೆಯ ವಿವಿಧ ರೂಪಗಳ ವಿಷಯದಲ್ಲೂ ಇದೇ ಆಗಿದೆ. ಮತ್ತೊಂದೆಡೆ ಕೆಲವು ಬುಡಕಟ್ಟು ಜನಾಂಗದವರು ಬಹಳ ಹಿಂದೆಯೇ ಹಿಂದೂ ದೇವತೆಗಳನ್ನು, ಮಹಾಭಾರತ ಮತ್ತು ರಾಮಾಯಣಗಳನ್ನು ತಮ್ಮದೇ ಆದ ಆವೃತ್ತಿಗಳಲ್ಲಿ ಪುನರ್ ಸೃಷ್ಟಿಸಿದ್ದಾರೆ. ಇದನ್ನು ಭಾರತದ ಈಶಾನ್ಯ ರಾಜ್ಯಗಳಿಂದ ತಮಿಳುನಾಡಿನವರೆಗೂ ದಾಖಲಿಸಲಾಗಿರುವುದು ನೋಡಬಹುದು.

ಇಷ್ಟು ದೀರ್ಘಕಾಲದಲ್ಲಿ ಸಹಜ ಸಂವಾದಗಳು ಹೇಗೆ ನಡೆದಿವೆ? ಏಕೆಂದರೆ, ಜಾನಪದ, ಬುಡಕಟ್ಟು ಮತ್ತು ಹಿಂದೂ ನಂಬಿಕೆ ವ್ಯವಸ್ಥೆಗಳು ಒಂದೇ ರೀತಿಯ ಅನೇಕ ಪರಿಕಲ್ಪನೆಗಳನ್ನು ಹೊಂದಿವೆ. ಉದಾಹರಣೆಗೆ, ಈ ಮೂರರಲ್ಲೂ, ಪರ್ವತಗಳು, ನದಿಗಳು, ಮರಗಳು, ಸಸ್ಯಗಳು, ಪ್ರಾಣಿಗಳು ಮತ್ತು ಕೆಲವು ಕಲ್ಲುಗಳಂತಹ ಪ್ರಕೃತಿಯ ಅಂಶಗಳನ್ನು ಪವಿತ್ರವೆಂದು ಪರಿಗಣಿಸಲಾಗಿದೆ. ಏಕೆಂದರೆ ಅವುಗಳ ಹಿಂದೆ ಒಂದು ಅರಿವು ಇದೆ. ವಾಸ್ತವವಾಗಿ ಬುಡಕಟ್ಟು ಜನಾಂಗದವರು ಆ ನೈಸರ್ಗಿಕ ಅಂಶಗಳಿಗೆ ಸಂಬಂಧಿಸಿದ ಹಲವು ದೇವತೆಗಳನ್ನು ಪೂಜಿಸುತ್ತಾರೆ. ಉದಾಹರಣೆಗೆ ತಮಿಳುನಾಡಿನ ನೀಲಗಿರಿಯ ತೋಡಾ ಬುಡಕಟ್ಟು ಜನಾಂಗದವರಿಗೆ (ಅವುಗಳಲ್ಲಿ ಒಂದನ್ನು ಬಲಭಾಗದಲ್ಲಿರುವ ಚಿತ್ರದಲ್ಲಿ ಚಿತ್ರಿಸಲಾಗಿದೆ) ಈ ಪರ್ವತ ಶ್ರೇಣಿಯ ಮೂವತ್ತಕ್ಕೂ ಹೆಚ್ಚು ಶಿಖರಗಳು ದೇವರು ಅಥವಾ ದೇವತೆಗಳು ಇರುವಿಕೆಯ ತಾಣವಾಗಿವೆ. ಆ ಶಿಖರಗಳು ಎಷ್ಟು ಪವಿತ್ರವಾಗಿವೆಯೆಂದರೆ ತೋಡಾಗಳು ಅವುಗಳನ್ನು ಬೆರಳಿನಿಂದ ತೋರಿಸುವುದನ್ನು ನಿರಾಕರಿಸುತ್ತಾರೆ.

ಆದರೆ ದೇವತೆಗಳ ಈ ಬಹುತ್ವದ ಹೊರತಾಗಿಯೂ, ಹಿಂದೂ ಧರ್ಮದಂತೆಯೇ, ಅನೇಕ ಬುಡಕಟ್ಟು ಗುಂಪುಗಳು ಉನ್ನತ ದೈವತ್ವ ಅಥವಾ ಸರ್ವೋಚ್ಚ ಜೀವಿಯ ಪರಿಕಲ್ಪನೆಯನ್ನು ಹೊಂದಿವೆ. ಉದಾಹರಣೆಗೆ, ಅರುಣಾಚಲ ಪ್ರದೇಶದ ಹಲವಾರು ಬುಡಕಟ್ಟು ಜನಾಂಗದವರು ಸೂರ್ಯ ಮತ್ತು ಚಂದ್ರನ ಸಂಯೋಜಿತ ರೂಪವಾದ ಡೊನಿಪೋಲೊವನ್ನು ಪೂಜಿಸುತ್ತಾರೆ, ಅವರು ನಂತರ ಸರ್ವೋಚ್ಚ ದೇವರ ಉನ್ನತ ಸ್ಥಾನಕ್ಕೆ ಏರಿದರು. ಮಧ್ಯ ಭಾರತದ ಕೆಲವು ಭಾಗಗಳಲ್ಲಿ ಖಂಡೋಬಾ ದೇವರ ವಿಷಯವೂ ಇದೇ ಆಗಿದೆ. ಪೂರ್ವ ಭಾರತದಲ್ಲಿ, ಮುಂಡಾ ಮತ್ತು ಸಂತಾಲ್ ಬುಡಕಟ್ಟು ಜನಾಂಗದವರು, ಇತರರೊಂದಿಗೆ, ಈ ಇಡೀ ಜಗತ್ತನ್ನು ಸೃಷ್ಟಿಸಿದ ಸರ್ವೋಚ್ಚ ದೇವತೆ ಸಿಂಗ್ಬೋಂಗಾವನ್ನು

© NCERT not to be republished

ಪೂಜಿಸುತ್ತಾರೆ. ಇಂತಹ ಇನ್ನೂ ಅನೇಕ ಉದಾಹರಣೆಗಳಿವೆ.

ಭಾರತೀಯ ಸಮಾಜಶಾಸ್ತ್ರಜ್ಞ ಆಂಡ್ರೆ ಬೆಟೈಲ್ ಈ ಪರಿಸ್ಥಿತಿಯನ್ನು ಈ ಮಾತುಗಳಲ್ಲಿ ಸಂಕ್ಷಿಪ್ತಗೊಳಿಸಿದ್ದಾರೆ:

> "ದಿ ಭಾರತೀಯ ಉಪಖಂಡದ ಸಾವಿರಾರು ಜಾತಿಗಳು ಮತ್ತು ಬುಡಕಟ್ಟುಗಳು ಇತಿಹಾಸದ ಆರಂಭದಿಂದಲೂ ಮತ್ತು ಅದಕ್ಕೂ ಮೊದಲು ತಮ್ಮ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳ ಮೂಲಕ ಪರಸ್ಪರವಾಗು ಪ್ರಭಾವವನ್ನು ಬೀರುತಾ ಬಂದ್ದಿವೆ. ಬುಡಕಟ್ಟು ಧರ್ಮಗಳು ಹಿಂದೂ ಧರ್ಮದಿಂದ ಪ್ರಭಾವಿತವಾಗಿವೆ ಎಂದು ವ್ಯಾಪಕವಾಗಿ ಒಪ್ಪಿಕೊಳ್ಳಲಾಗಿದೆ, ಆದರೆ ಹಿಂದೂ ಧರ್ಮವು ಅದರ ರಚನಾತ್ಮಕ ಹಂತದಲ್ಲಿ ಮಾತ್ರವಲ್ಲದೆ ಅದರ ವಿಕಾಸದ ಉದ್ದಕ್ಕೂ ಬುಡಕಟ್ಟು ಧರ್ಮಗಳಿಂದ ಪ್ರಭಾವಿತವಾಗಿದೆ ಎಂಬುದು ಅಷ್ಟೇ ಸತ್ಯ.

ಈ ಸುದೀರ್ಘ ಪಾಠದ ಚರ್ಚೆಯಲ್ಲಿ ಸಂವಾದದ ಪರಂಪರೆಯು ಪರಸ್ಪರ ಸಮೃದ್ಧಿಯಾಗಿವುದನ್ನು ಕಾಣುತ್ತೇವೆ. ಈ ರೀತಿಯಾಗಿ, ಜಾನಪದ, ಬುಡಕಟ್ಟು ನಂಬಿಕೆಗಳು ಮತ್ತು ಆಚರಣೆಗಳು ಭಾರತದ ಸಾಂಸ್ಕೃತಿಕ ಬೇರುಗಳಲ್ಲಿ ಸೇರಿವೆ. ಮುಂದಿನ ಅಧ್ಯಾಯದಲ್ಲಿ ನಾವು ಈ ಅಂಶವನ್ನು ಮತ್ತಷ್ಟು ನೋಡುತ್ತೇವೆ.

ನಾವು ಮುಂದುವರಿಯುವ ಮೊದಲು ...

- ಭಾರತದ ಅತ್ಯಂತ ಪ್ರಾಚೀನ ಗ್ರಂಥಗಳಾದ ವೇದಗಳು ಹಲವಾರು ಚಿಂತನೆಯ ಪಂಥಗಳಿಗೆ ನಾಂದಿ ಹಾಡಿದವು. ವೇದಾಂತ ಮತ್ತು ಯೋಗ ಇವುಗಳಲ್ಲಿ ಅತ್ಯಂತ ಪ್ರಸಿದ್ಧವಾದವು.
- ವೇದಗಳ ತತ್ವಗಳಿಂದ ಬೌದ್ಧ ಮತ್ತು ಜೈನ ಧರ್ಮಗಳು ಹೊರಬಂದು ಕೆಲವು ನಿರ್ದಿಷ್ಟ ಮೌಲ್ಯಗಳು ಮತ್ತು ಆಚರಣೆಗಳಿಗೆ ಒತ್ತು ನೀಡಿದವು.
- ಈ ಶಾಖೆಗಳು ವಿಭಿನ್ನ ತತ್ವ ಮತ್ತು ವಿಧಾನಗಳನ್ನು ಹೊಂದಿದ್ದರೂ, ಅವು ಕೆಲವು ಪ್ರಮುಖ ಪರಿಕಲ್ಪನೆಗಳನ್ನು ಸಹ ಸಮಾನವಾಗಿ ಹಂಚಿಕೊಂಡವು. ಅವುಗಳೆಲ್ಲವೂ ದುಃಖದ ಕಾರಣ ಮತ್ತು ಅಜ್ಞಾನವನ್ನು ತೊಡೆದುಹಾಕುವ ಮಾರ್ಗಗಳನ್ನು ಹುಡುಕುತ್ತವೆ.
- ಬುಡಕಟ್ಟುಗಳ ನಂಬಿಕೆ ವ್ಯವಸ್ಥೆ, ಕಲೆಗಳು ಸಹಸ್ರಮಾನಗಳಿಂದ ಹಿಂದೂ ಧರ್ಮದೊಂದಿಗೆ ಸಂಪರ್ಕವನ್ನು ಇಟ್ಟುಕೊಂಡಿವೆ. ಎಲ್ಲ ಕಡೆಯಿಂದಲೂ ಮುಕ್ತವಾಗಿ ಸ್ವೀಕರಿಸುವುದು ಮತ್ತು ಕೊಡುವುದು ಇತ್ತು. ಬುಡಕಟ್ಟು ನಂಬಿಕೆ ವ್ಯವಸ್ಥೆಗಳು ಸಾಮಾನ್ಯವಾಗಿ ಭೂಮಿಯನ್ನು ಮತ್ತು ಅದರ ವೈಶಿಷ್ಟ್ಯಗಳನ್ನು ಪವಿತ್ರವೆಂದು ಪರಿಗಣಿಸುತ್ತವೆ. ಅದೇ ಸಮಯದಲ್ಲಿ, ಅವರು ಹೆಚ್ಚಾಗಿ ದೈವತ್ವದ ಉನ್ನತ ಪರಿಕಲ್ಪನೆಯನ್ನು ಹೊಂದಿದ್ದರು.

© NCERT not to be republished

ಪ್ರಶ್ನೆಗಳು, ಚಟುವಟಿಕೆಗಳು ಮತ್ತು ಯೋಜನೆಗಳು

೧. ನೀವು ನಚಿಕೇತನಾಗಿದ್ದರೆ, ನೀವು ಯಮನನ್ನು ಯಾವ ಪ್ರಶ್ನೆಗಳನ್ನು ಕೇಳಲು ಬಯಸುತ್ತೀರಿ? ಅವುಗಳನ್ನು ೧೦೦-೧೫೦ಪದಗಳಲ್ಲಿ ಬರೆಯಿರಿ.

೨. ಬೌದ್ಧ ಧರ್ಮದ ಕೆಲವು ಪ್ರಮುಖ್ಯವಾ ವಿಚಾರಗಳನ್ನು ವಿವರಿಸಿ. ಅವುಗಳ ಬಗ್ಗೆ ಸಂಕ್ಷಿಪ್ತವಾಗಿ ಪ್ರತಿಕ್ರಿಯಿಸಿ.

೩. ಬುದ್ಧನ ಉಲ್ಲೇಖವನ್ನು ಅದರ ಅರ್ಥವನ್ನು ಎಲ್ಲರೂ ಅರ್ಥಮಾಡಿಕೊಂಡಿದ್ದಾರೆ ಎಂದು ಖಚಿತಪಡಿಸಿಕೊಳ್ಳಲು "ನೀರಿನಿಂದ ಯಾರೂಶುದ್ಧ/ಮುಕ್ತರಾಗುವುದಿಲ್ಲ, ಆದರೆ ಅನೇಕ ಜನರು ಇಲ್ಲಿ [ಪವಿತ್ರ ನದಿಗಳಲ್ಲಿ] ಸ್ನಾನ ಮಾಡಬಹುದು" ಎಂದು ಪ್ರಾರಂಭವಾಗುವ ಉದ್ಧರಣದೊಂದಿಗೆ ತರಗತಿಯಲ್ಲಿ ಚರ್ಚೆಯನ್ನು ಮಾಡಿ.

೪. ಜೈನ ಧರ್ಮದ ಕೆಲವು ಪ್ರಮುಖ ವಿಚಾರಗಳನ್ನು ವಿವರಿಸಿ. ಅವುಗಳ ಬಗ್ಗೆ ಸಂಕ್ಷಿಪ್ತವಾಗಿ ಪ್ರತಿಕ್ರಿಯಿಸಿ.

೫. ಆಂಡ್ರೆ ಬೆಟೈಲ್ ಅವರ ಚಿಂತನೆಯನ್ನು ತರಗತಿಯಲ್ಲಿ ಪರಿಗಣಿಸಿ ಮತ್ತು ಚರ್ಚಿಸಿ (ನೋಡಿ ಪುಟ ೧೨೨).

೬. ನಿಮ್ಮ ಪ್ರದೇಶದ ಜನಪ್ರಿಯ ದೇವರುಗಳು ಮತ್ತು ದೇವತೆಗಳು, ಮತ್ತು ಅವರಿಗೆ ಸಂಬಂಧಿಸಿರುವ ಹಬ್ಬಗಳನ್ನು ಪಟ್ಟಿ ಮಾಡಿ.

೭. ತರಗತಿ ಚಟುವಟಿಕೆಯಾಗಿ, ನಿಮ್ಮ ಪ್ರದೇಶ ಅಥವಾ ರಾಜ್ಯದ ಎರಡು ಅಥವಾ ಮೂರು ಬುಡಕಟ್ಟು ಗುಂಪುಗಳನ್ನು ಪಟ್ಟಿ ಮಾಡಿ ಅವರ ಕೆಲವು ಕಲೆ ಮತ್ತು ನಂಬಿಕೆ ವ್ಯವಸ್ಥೆಗಳನ್ನು ದಾಖಲಿಸಿ.

ಸರಿ ಅಥವಾ ತಪ್ಪು

೧. ವೈದಿಕ ಸ್ತೋತ್ರಗಳನ್ನು ತಾಳೆಗರಿ ಹಸ್ತಪ್ರತಿಗಳ ಮೇಲೆ ಬರೆಯಲಾಗುತ್ತಿತ್ತು.

೨ ವೇದಗಳು ಭಾರತದ ಅತ್ಯಂತ ಹಳೆಯ ಗ್ರಂಥಗಳಾಗಿವೆ.

೩. ಏಕಂ ಸತ್ ವಿಪ್ರ ಬಹುಧಾ ವದಂತಿ ಎಂಬ ವೈದಿಕ ಹೇಳಿಕೆಯು ಬ್ರಹ್ಮಾಂಡದ ಶಕ್ತಿಗಳ ಏಕತೆಯ ಮೇಲಿನ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ.

೪. ಬೌದ್ಧ ಧರ್ಮವು ವೇದಗಳಿಗಿಂತ ಹಳೆಯದು.

೫. ಜೈನ ಧರ್ಮವು ಬೌದ್ಧ ಧರ್ಮದ ಒಂದು ಶಾಖೆಯಾಗಿ ಹೊರಹೊಮ್ಮಿತು.

೬. ಬೌದ್ಧ ಮತ್ತು ಜೈನ ಧರ್ಮಗಳೆರಡೂ ಶಾಂತಿಯುತ ಸಹಬಾಳ್ವೆ ಮತ್ತು ಎಲ್ಲಾ ಜೀವಿಗಳಿಗೆ ಹಾನಿಯನ್ನು ತಪ್ಪಿಸಲು ಪ್ರತಿಪಾದಿಸಿದವು.

೭. ಬುಡಕಟ್ಟು ನಂಬಿಕೆ ವ್ಯವಸ್ಥೆಗಳು ಆತ್ಮಗಳು ಮತ್ತು ಸಣ್ಣ ದೇವತೆಗಳ ನಂಬಿಕೆಗೆ ಸೀಮಿತವಾಗಿವೆ.

ತರಗತಿ ಚಟುವಟಿಕೆ

೧. ಜೀವನದ ಬಗ್ಗೆ ಪ್ರಶ್ನೆಗಳನ್ನು ಕೇಳುವ ಹಲವಾರು ನಚಿಕೇತರಿಂದ ಸುತ್ತುವರೆದಿರುವ ಸಾವಿನ ದೇವರಾದ ಯಮನೊಂದಿಗೆ ಒಂದು ಸಣ್ಣ ನಾಟಕವನ್ನು ನಡೆಸಿ.

© NCERT not to be republished



ಆಲದ ಮರವು ಅಧ್ಯಾಯ ೭ ಮತ್ತು ೮ ರಲ್ಲಿನ ವಿಷಯಗಳಿಗೆ ಸೂಕ್ತವಾದ ಉದಾಹರಣೆಯಾಗಿದೆ, ಮತ್ತು ಭಾರತೀಯ ನಾಗರಿಕತೆಯ ಉತ್ತಮ ಸಂಕೇತವಾಗಿದೆ. ಅದರ ಆಳವಾದ ಬೇರು ವ್ಯವಸ್ಥೆ, ಬೃಹತ್ ಕಾಂಡ ಮತ್ತು ಕೊಂಬೆಗಳು ಎಲ್ಲಾ ದಿಕ್ಕುಗಳಲ್ಲಿ ಹರಡಿರುವುದರಿಂದ, ಇದು ವಿಶಾಲ ಪ್ರದೇಶಕ್ಕೆ ವಿಸ್ತರಿಸಬಹುದು ಮತ್ತು ಅನೇಕ ಶತಮಾನಗಳವರೆಗೆ ಇರುತ್ತದೆ. ಇದು ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿಗಳಿಗೆ ಆಶ್ರಯ ನೀಡುತ್ತದೆ ಮತ್ತು ಅದರ ಕೊಂಬೆಗಳು ಕಾಂಡದಲ್ಲಿ ಒಂದಾಗಿದ್ದರೂ, ತಮ್ಮದೇ ಆದ ಹೊಸ ಬೇರುಗಳನ್ನು ಹೊರಹಾಕಲು ಪ್ರೋತ್ಸಾಹಿಸುತ್ತವೆ. ವಾಸ್ತವವಾಗಿ, ಹಿಂದೂ ಧರ್ಮ, ಬೌದ್ಧ ಧರ್ಮ ಮತ್ತು ಜೈನ ಧರ್ಮಗಳು ಆಲದ ಮರವನ್ನು ಪವಿತ್ರವೆಂದು ಪರಿಗಣಿಸುತ್ತವೆ.